civic
BANGALORE
CITIZENS VOLUNTARY INITIATIVE FOR THE CITY


**ಸಿವಿಕ್ ಬೆಂಗಳೂರು**
**ಸಿಟಿಜನ್ಸ್ ವಾಲಂಟರಿ ಇನಿಶಿಯೆಟಿವ್ ಫಾರ್ ದಿ ಸಿಟಿ ಒಫ್ ಬೆಂಗಳೂರು**
**(ರಿ., ಪೆಬ್ಲಿಕ್ ಚರಿಟೇಬಲ್ ಟ್ರಸ್ಟ್ ನಂ.569/94–95 IV)**
**# 14, 2ನೇ ಮಹಡಿ, 4ನೇ ಮುಖ್ಯರಸ್ತೆ, 12ನೇ ಅಡ್ಡರಸ್ತೆ,**
**ವಸಂತನಗರ, ಬೆಂಗಳೂರು – 560052.**
**ಫೋನ್ : 22386864 , 22351389**


# ಜನತೆಗೆ ಅಧಿಕಾರ

## ನಗರದ ಸ್ಥಳೀಯ ಆಡಳಿತದಲ್ಲಿ ಜನಸಮೂಹದ ಭಾಗವಹಿಸುವಿಕೆ ತರುವುದು




civic
BANGALORE
CITIZENS VOLUNTARY INITIATIVE FOR THE CITY

# ಜನತೆಗೆ ಅಧಿಕಾರ

ನಗರದ ಸ್ಥಳೀಯ ಆಡಳಿತದಲ್ಲಿ
ಜನಸಮೂಹದ ಭಾಗವಹಿಸುವಿಕೆ
ತರುವುದು

CIVIC
BANGALORE
CITIZENS VOLUNTARY INITIATIVE FOR THE CITY

74ನೇ ಸಂವಿಧಾನಾತ್ಮಕ ತಿದ್ದುಪಡಿ ಮೇಲೆ
ಮಾಹಿತಿ ಕೈಪಿಡಿ (ನಗರಪಾಲಿಕಾ ವಿಧಿ) ಮತ್ತು
ಕರ್ನಾಟಕದಲ್ಲಿ ವಾರ್ಡ್ಸ್ ಸಮಿತಿಗಳು

ಚುನಾಯಿತ ಪ್ರತಿನಿಧಿಗಳು,
ಸ್ವಯಂ ಸೇವಾ ಸಂಸ್ಥೆಗಳು, ನಾಗರಿಕರ ಕ್ಷೇಮಾಭಿವೃದ್ಧಿ ಸಂಘಗಳು
(ಆರ್.ಡಬ್ಲು.ಎ ಗಳು), ಸಮುದಾಯ ನೆಲೆಯ ಸಂಸ್ಥೆಗಳು (ಸಿ.ಬಿ.ಓ ಗಳು)
ಮತ್ತು ಇತರ ನಾಗರಿಕರಿಗಾಗಿ

ಯಿಂದ
ಕಾತ್ಯಾಯನಿ ಚಾಮರಾಜ್ ಮತ್ತು ಪ್ರಸನ್ನಾ ರಾವ್

ಸಿವಿಕ್ ಬೆಂಗಳೂರು
ಸಿಟಿಜನ್ಸ್ ವಾಲಂಟರಿ ಇನಿಶಿಯೆಟಿವ್ ಫಾರ್ ದಿ ಸಿಟಿ ಒಫ್ ಬೆಂಗಳೂರು
(ರಿ., ಪೆಬ್ಲಿಕ್ ಚರಿಟೇಬಲ್ ಟ್ರಸ್ಟ್ ನಂ.569/94-95 IV )
# 14, 2ನೇ ಮಹಡಿ, 4ನೇ ಮುಖ್ಯರಸ್ತೆ, 12ನೇ ಅಡ್ಡರಸ್ತೆ,
ವಸಂತನಗರ, ಬೆಂಗಳೂರು - 560052.
ಫೋನ್ : 22386864 , 22351389

## ವಿಷಯ ಸೂಚಿ

ಮುನ್ನುಡಿ

1. 74ನೇ ಸಂವಿಧಾನಾತ್ಮಕ ತಿದ್ದುಪಡಿ 4

2. ಬೆಂಗಳೂರು ನಗರ ಪಾಲಿಕೆಯಲ್ಲಿ ವಾರ್ಡ್ ಸಮಿತಿಯ ಕಾರ್ಯಚರಣೆ ಮೇಲೆ ಸಿವಿಕ್ ಸಂಸ್ಥೆಯ ಅನ್ವೇಷಣೆಗಳು 17

3. ಸಿವಿಕ್ ಸಂಸ್ಥೆಯ ಶಿಫಾರಸುಗಳು 21

4. ಸಮಾಪ್ತಿ (ಗೊತ್ತುವಳಿಗಳು) 26

# ಮುನ್ನುಡಿ

ಗಾಂಧಿಜೀಯ "ಗ್ರಾಮ ಸ್ವರಾಜ" ಅಥವಾ ಗ್ರಾಮ ಪ್ರಜಾಧಿಪತ್ಯ ಚಿಂತನೆಯು ಗ್ರಾಮಗಳು ಸ್ವಾವಲಂಬಿಯಾಗಿಯೂ ಮತ್ತು ಅದನ್ನು ಆಳುವ ಸಂಸ್ಥೆಗಳು, ಪಂಚಾಯತುಗಳು, ಸ್ಥಳೀಯ ಸ್ವಯಂ ಸರಕಾರದ ಸಾಚಾ ಸಂಸ್ಥೆಯಾಗಿರಬೇಕು ಎಂದಾಗಿತ್ತು. ಆದರೆ ಸ್ವಾತಂತ್ರ್ಯ ಬಂದ 57 ವರ್ಷಗಳ ನಂತರವೂ, ಸ್ಥಳೀಯ ವ್ಯವಹಾರದ ಕುರಿತು ನಿರ್ಣಯಗಳು (ತೀರ್ಮಾನಗಳು) ಮೇಲಿನ ಹಂತದಲ್ಲೇ ತೀರ್ಮಾನು ಆಗುವುದರ ಕಾರಣ ಜನ ಸಮುದಾಯದ ಸ್ವಾಮ್ಯ ನಶಿಸಿ ತಮ್ಮ ಸಂಪನ್ಮೂಲದ, ಅಭಿವೃದ್ಧಿ ಆಯ್ಕೆಗಳ ಮತ್ತು ಜೀವನೋಪಾಯಗಳ ಕುರಿತು ಸ್ವತಃ ತೀರ್ಮಾನ ತೆಗೆದುಕೊಳ್ಳುವ ಹಕ್ಕು ಅವರಿಗೆ ಇಲ್ಲವಾಗಿ ಅದು ಕೇಂದ್ರೀಕರಣಕ್ಕೆ ದಾರಿ ಮಾಡಿ ಕೊಟ್ಟಿದೆ.

ನಗರ ಪ್ರದೇಶಗಳಲ್ಲಿ ಕೂಡಾ, ತಮ್ಮ ಸ್ವಂತ ವ್ಯವಹಾರಗಳಲ್ಲಿ, ಸ್ಥಳೀಯ ಸಮಸ್ಯೆಗಳ ಪರಿಹಾರದಲ್ಲಿ, ಸಮುದಾಯಗಳಿಗೆ ಅಧಿಕಾರವಿಲ್ಲದ ಕಾರಣ ಮತ್ತು ದೂರವೆಲ್ಲಿಯೋ ಇರುವ ಸರಕಾರದ ಅಸಾಮರ್ಥ್ಯದಿಂದ ನಗರಗಳು ತುಂಬಿ ತುಳುಕುವ ಕಸದ ತೊಟ್ಟಿಗಳು, ಪ್ಲಾಸ್ಟಿಕ್‌ಗಳಿಂದ ಮುಚ್ಚಿಹೋದ ಚರಂಡಿಗಳು, ಕೊಳಕು ತುಂಬಿದ ಖಾಲಿ ಜಮೀನುಗಳು, ಸವೆದ ಆಳವಾದ ಕುಳಗಳ ರಸ್ತೆಗಳು, ಹೊಂಡಗಳಿಂದ ನಡೆಯಲು ಸುಗಮವಿಲ್ಲದ ಪಾದಾಚಾರಿ ರಸ್ತೆಗಳು. ಎಲ್ಲೆಲ್ಲೂ ಬೊಗಳುವ ಬೀದಿ ನಾಯಿಗಳು, ಮುಂತಾದವುಗಳಿಂದ ನಗರಗಳು ಹೊಲಸು ತಾಣವಾಗಿ ಪರಿವರ್ತಿತವಾಗಿವೆ. ತಮ್ಮ ಪ್ರದೇಶದ ಅಭಿವೃದ್ಧಿಯಲ್ಲಾಗಲ್ಲಿ, ಯೋಜನೆಯಲ್ಲಾಗಲ್ಲಿ ತೀರ್ಮಾನ ತೆಗೆದುಕೊಳ್ಳುವುದರಲ್ಲಿ ನಗರ ನಿವಾಸಿಗಳ ಪಾತ್ರಗಳಿರದೇ, ಅವರನ್ನು ಶಕ್ತಿ ಹೀನರನ್ನಾಗಿಸಿ ತಮ್ಮ ನಗರಗಳಿಂದ, ನಗರ ನಿವಾಸಿಗಳನ್ನು ಹೆಚ್ಚೆಚ್ಚು ಪರಕೀಯರನ್ನಾಗಿ ಮಾಡಿದೆ. ನಗರಗಳ ಕುರಿತು ತೀರ್ಮಾನಗಳು ದೂರದ ಅಜ್ಞಾತ ಆಡಳಿತದಿಂದ ಮೇಲಿನಿಂದ ಕೆಳಗೆ ಹರಿದು ಬರುವ ರೀತಿಯಲ್ಲಿ ತೆಗೆದುಕೊಳ್ಳಲಾಗುತ್ತದೆ. ನಗರ ನಿವಾಸಿಗಳಿಗೆ ತಮ್ಮ ಸಮಸ್ಯೆ ಪರಿಹಾರಕ್ಕೆ ಎಲ್ಲಿ ಹೋಗುವುದು, ಯಾರನ್ನು ಸಂಪರ್ಕಿಸುವುದು, ಯಾವ ಸಂಖ್ಯೆಗೆ ದೂರವಾಣಿ ಮಾಡಬೇಕೆಂಬುದು ತಿಳಿಯುವುದಿಲ್ಲ. ಇದರಿಂದೆಲ್ಲ ಯಾರೇ ದೂರವೇ ಉಳಿದಾಗ ಅವರನ್ನು ದೂರಲೂ ಸಾಧ್ಯವಿಲ್ಲ.

ಇದರಿಂದ ಸ್ಥಳೀಯ ಸಮುದಾಯಕ್ಕೆ ತಮ್ಮ ಸ್ವಯಂ ಯೋಜನೆ ಮತ್ತು ಅಭಿವೃದ್ಧಿಗೆ ಅವರ ಹಕ್ಕು ಸ್ವಾಮ್ಯ ಹಿಂತಿರುಗಿಸಲು ಕೇಂದ್ರ ಸರಕಾರವು "ನಗರಪಾಲಿಕಾ ವಿಧಿ (ಆಕ್ಟ್) 1992' ಎಂದು ತಿಳಿಯಲಾದ "74ನೇ ಸಂವಿಧಾನಾತ್ಮಕ ತಿದ್ದುಪಡಿಯನ್ನು"

ಜಾರಿಗೊಳಿಸಿದೆ. ಮತ್ತು ನಗರಗಳಿಗೆ ಸಮಾನಂತರವಾಗಿ ಗ್ರಾಮ ಪ್ರದೇಶಗಳಲ್ಲಿ "73ನೇ ಸಂವಿಧಾನಾತ್ಮಕ ತಿದ್ದುಪಡಿಯನ್ನು" ಪಂಚಾಯತ್ ರಾಜ್ ಕಾಯಿದೆಯನ್ನಾಗಿ' ಸರಕಾರದ ಆಡಳಿತ ಅಧಿಕಾರವನ್ನು ಗ್ರಾಮದ ಸ್ಥಳೀಯ ಸ್ವಯಂ ಆಡಳಿತ ಸಂಸ್ಥೆಗಳಿಗೆ ವಿಕೇಂದ್ರೀಕರಣಗೊಳಿಸಲಾಗಿದೆ.

ವಿಕೇಂದ್ರಿಕರಣಗೊಳಿಸುವುದರಿಂದ ಸ್ಥಳೀಯವಾಗಿ ತೀರ್ಮಾನ ತೆಗೆದುಕೊಳ್ಳುವ ಅಧಿಕಾರವನ್ನು ಸಮುದಾಯಗಳಿಗೆ ಸಾಧ್ಯವಾಗುವುದೆಂಬ ನಂಬಿಗೆ ಇತ್ತು. ಅಲ್ಲದೇ ಸ್ಥಳೀಯ ಸರ್ಕಾರಗಳು ನಾಗರಿಕರ ಪರ ಸಾಮಿಪ್ಯ, ಪಾರದರ್ಶಕತೆ ಮತ್ತು ಹೊಣೆಗಾರಿಕೆಯನ್ನು ಖಾತ್ರಿ ಪಡಿಸುತ್ತವೆ ಎಂಬ ಆಸೆ ಇತ್ತು. ನಗರಪಾಲಿಕಾ ವಿಧಿ (ಆಕ್ಟ್) ಯನ್ನು ನಿಜವಾದ ಚೈತನ್ಯದಲ್ಲಿ ಜಾರಿಗೊಳಿಸಿದ್ದೇ ಆದಲ್ಲಿ ನಗರನಿವಾಸಿಗಳಿಗೆ ಸಮುದಾಯದ ಬಗ್ಗೆ ಕಾಳಜಿ, ತನ್ನ ಪ್ರದೇಶದ ಜತೆ ಗುರುತಿಸಿಕೊಳ್ಳುವಿಕೆ ಮತ್ತು ಸ್ಥಳೀಯ ಆಡಳಿತದಲ್ಲಿ ಹಾಗೂ ಅಭಿವೃದ್ಧಿಯಲ್ಲಿ ಸಕ್ರಿಯವಾಗಿ ಪಾಲುಗೊಳ್ಳಲು ಪ್ರೇರಣೆ ಸಿಗಬಹುದಾಗಿತ್ತು.

ಆದರೆ ನಗರ ಪಾಲಿಕಾರ ಕಾಯಿದೆ (ವಿಧಿ)' ಜಾರಿಗೊಳಿಸುವುದರ ಬದಲು, ಇತ್ತೀಚಿನ ದಿನಗಳಲ್ಲಿ ಕರ್ನಾಟಕ ಸರಕಾರವು, ನಗರ ಆಡಳಿತ ಸುಧಾರಿಸುವ ದೃಷ್ಟಿಯಿಂದ, ಪಾಲುಗಾರಿಕೆಯ ಆಡಳಿತ ತರುವ ಹೆಸರಿನಲ್ಲಿ ತೋರಿಕೆಯ (ಡಾಂಬಿಕ), ಸಂವಿಧಾನ ಬಾಹಿರ ಮಂಡಳಿಗಳ ಉದಾಹರಣೆಗೆ, 'ಬೆಂಗಳೂರು ಅಜೆಂಡಾ ಟಾಸ್ ಫೋರ್ಸ್' ಅಂತಹ ಸಾರ್ವಜನಿಕ (Public) – ಖಾಸಗಿ (Private) ಪಾಲುಗಾರಿಕೆಯ ಮಂಡಳಿ ರಚನೆಗೆ ಪ್ರಯತ್ನಗಳನ್ನು ಮಾಡಿದೆ. ಅದೂ ಅಲ್ಲದೇ ಸೀಮಿತ ಪ್ರಮಾಣದಲ್ಲಿ ಬಜೆಟ್ ತಯಾರಿಸುವಿಕೆಯಲ್ಲಿ ಭಾಗವಹಿಸುವಿಕೆ ತರುವಲ್ಲಿ, ನಗರ ಆಡಳಿತದಲ್ಲಿ ನಾಗರಿಕರನ್ನು ಸಕ್ರಿಯಗೊಳಿಸುವಲ್ಲಿ ಮತ್ತು ಸಶಕ್ತರನಾಗಿ ಮಾಡುವಲ್ಲಿ 'ಜನಾಗ್ರಹ' ದಂತಹ ನಾಗರೀಕ ಸಮಾಜದ ಗುಂಪುಗಳ ಪ್ರಯತ್ನಗಳೂ ನಡೆದಿವೆ. ಆದರೆ ಈ ಪ್ರಯತ್ನಗಳಿಗೆ ಕಾನೂನು ರೀತಿಯಲ್ಲಾಗಲೀ ಸಾಂಸ್ಥಿಕ ರೀತಿಯಲ್ಲಾಗಲೀ ಬೆಂಬಲ ವಿಲ್ಲದ ಕಾರಣ, ಇವುಗಳು ರಾಜಕೀಯ ಹಾಗೂ ಆಡಳಿತದ ಖಯ್ಯಾಲಿ ಹಾಗೂ ಬ್ರಾಂತಿಯ ಮೇಲೆ ಅವಲಂಬಿಸಿರುತ್ತವೆ.

ಇಂತಹ ಪ್ರಯತ್ನಗಳನ್ನು ಯಾವುದೇ ರೀತಿಯಲ್ಲಿ ಕಡೆಗಾಣಿಸದೆಯೂ, ದೂಷಿಸದೆಯೊ ಕೂಡ, ಇವುಗಳು ಹೆಚ್ಚೆಂದರೆ 74ನೆ ಸಂವಿಧಾನತ್ಮಕ ತಿದ್ದುಪಡಿಯ ಅನುಷ್ಠಾನಕ್ಕೆ ಪೂರಕವಾಗಲು ಸಹಾಯಕವಾಗುವವೇ ವಿನಹ, ಅದರ ಸ್ಥಾನವನ್ನು ಅವು ಅತಿಕ್ರಮಿಸಲಾಗವು, ಎಂಬುವುದು ನಮ್ಮ ಅಭಿಪ್ರಾಯ.

ಈ ಕೈಪಿಡಿಯು ನಗರ ಸ್ಥಳೀಯ ಸ್ವಯಂ ಆಡಳಿತ ಸಂಸ್ಥೆಗಳ ಚುನಾಯಿತ ಪ್ರತಿನಿಗಳಿಗೆ, ನಾಗರಿಕ ಸಮಾಜದ ಸಂಸ್ಥೆಗಳಿಗೆ ಮತ್ತು ನಗರ ನಿವಾಸಿಗಳಿಗೆ ಅವರು ನಗರಪಾಲಿಕಾ ಕಾಯಿದೆ ಅನ್ವಯ ಹೇಗೆ ಕೆಲಸ ಮಾಡಲು ಸಾಧ್ಯವೆನ್ನುವ ಮಾಹಿತಿಯನ್ನು ಒದಗಿಸುವ ಪ್ರಯತ್ನ.



**"ಸಿವಿಕ್ ಬೆಂಗಳೂರು" ಕುರಿತು.**

"ಸಿವಿಕ್ ಬೆಂಗಳೂರು" (ಸಿಟಿಜನ್ಸ್ ವಾಲಂಟರಿ ಇನಶಿಯೆಟಿವ್ ಫಾರ ದಿ ಸಿಟಿ ಆಫ್ ಬೆಂಗಳೂರು) ಬೆಂಗಳೂರಿನ ನಿವಾಸಿಗಳ ಗುಂಪೊಂದು ಬೆಂಗಳೂರಿನ ಅಭಿವೃದ್ಧಿ ಎಲ್ಲಿ ತಪ್ಪಾಗಿದೆ ಮತ್ತು ಎಲ್ಲಿ ಹೇಗೆ ಸರಿಪಡಿಸಬಹುದು ಎಂದು ತಮ್ಮಲ್ಲೇ ಆಲೋಚಿಸಿ ಪರಸ್ಪರ ವಿಮರ್ಶಿಸಿ ಕಾಳಜಿ ತೆಗೆದುಕೊಂಡು 1992 ರಲ್ಲಿ ಸ್ಥಾಪಿಸಿದ ಒಂದು ಸಂಸ್ಥೆ. ಇದು ಬೆಂಗಳೂರಿನ ನಾಗರಿಕರ ಪ್ರಸ್ತುತ ಗೊಂದಲ ತಲ್ಲಣವನ್ನು ಸಮರ್ಥವಾಗಿ ತೆರೆದಿಡುವಲ್ಲಿ, ನಿವಾರಿಸುವುದರಲ್ಲಿ ಆಸಕ್ತವಾಗಿರುವ ಗುಂಪು. 'ಸಿವಿಕ್' ಸಂಸ್ಥೆಯು ನಗರ ಅಭಿವೃದ್ಧಿ ಯಾವ ರೀತಿ ಸಂಯೋಜಿಸಬಹುದು, ಹೇಗೆ ಕಾರ್ಯಾಚರಣೆ ನಿರ್ವಹಿಸಬಹುದು ಎಂದು ಹೆಚ್ಚಿನ ಹೊಣೆಗಾರಿಕೆ ಮತ್ತು ಪಾರದರ್ಶಿಕತೆ ತೋರಿಸುವ ಆಶಯವನ್ನು ಹೊಂದಿರುತ್ತದೆ. ಒಬ್ಬಂಟಿಯಾಗಿ ತನ್ನ ದನಿ ಅಡಗಿ ಹೋದ ಸನ್ನಿವೇಶದಲ್ಲಿ ಸಾಮೂಹಿಕವಾಗಿ ಕೆಲಸ ನಿರ್ವಹಿಸಲು ಸಾಧ್ಯತೆಗಳನ್ನು ಅರಸಿ ಒಟ್ಟು ಜತೆಗೂಡಿದಾಗ ನಾಗರಿಕರ ಧ್ವನಿಯು ಕೇಳಲು ಸಾಧ್ಯವಾಗುವಂತೆ ಮಾಡಲು ಸದಾ ಅಂತಹ ಚಟುವಟಿಕೆಯಲ್ಲಿ ಕ್ರಿಯಾಶೀಲವಾಗಿರುತ್ತದೆ.

ಗ್ರಂಥಕರ್ತರ ಕುರಿತು : ಕಾತ್ಯಾಯಿನಿ ಚಾಮರಾಜ್, ಫ್ರೀಲಾನ್ಸ್ ಪತ್ರಕರ್ತೆ ಹಾಗೂ, "ಸಿವಿಕ್ ಬೆಂಗಳೂರು" ಟ್ರಸ್ಟಿಯಾಗಿದ್ದಾರೆ. ಪ್ರಸನ್ನಾ ರಾವ್, "ಸಿವಿಕ್ ಬೆಂಗಳೂರು" ಹಾಗೂ ಟ್ಯಾಡ್ (TIDE) ಸಂಸ್ಥೆಗಳಲ್ಲಿ ಪ್ರೊಗ್ರಾಮ್ ಕೂ ಆರ್ಡಿನೇಟರ್ ಆಗಿ ಕಾರ್ಯನಿರ್ವಹಿಸುತ್ತಿದ್ದರು.

**ಅಂಗೀಕಾರ ಸಲ್ಲಿಕೆ**

ಗ್ರಂಥ ಕರ್ತರು ಈ ಒಂದು ಪ್ರಕಟಣೆ ತರಲು ಬೆಂಬಲ ನೀಡಿದ ಬೆಂಗಳೂರು ನಗರಪಾಲಿಕಾ ಸದಸ್ಯರುಗಳಿಗೂ, ಅಧಿಕಾರಿಗಳು, ವಾರ್ಡ್ ಸಮಿತಿ ಸದಸ್ಯರುಗಳಿಗೂ, ನಾಗರಿಕರ ಕ್ಷೇಮಾಭಿವೃದ್ಧಿ ಸಂಸ್ಥೆಗಳಿಗೂ "ಸಿವಿಕ್ ಬೆಂಗಳೂರು" ಪ್ರತೀಯೊಬ್ಬರ ಹೆಸರು ಉಲ್ಲೇಖಿಸಲು ಕಷ್ಟವಾದ ಕಾರಣ ಪ್ರತ್ಯಕ್ಷವಾಗಿ ಪರೋಕ್ಷವಾಗಿ ನೆರವಾದ ಎಲ್ಲರನ್ನೂ ಗ್ರಂಥ ಕರ್ತರು ಕೃತಜ್ಞತೆಯಿಂದ ಸ್ಮರಿಸುತ್ತಾರೆ.

# 74ನೇ ಸಂವಿಧಾನಾತ್ಮಕ ತಿದ್ದುಪಡಿ

### 1.1 ವಿಕೇಂದ್ರೀಕರಣದ ಬಗ್ಗೆ ತತ್ವಾಧಾರ ವಿವರಣೆ

ಅತೀ ವಿಶಾಲವಾದ ಮತ್ತು ಬಹುಮುಖಿ ಸಂಸ್ಕೃತಿ ಹೊಂದಿದ ವಿಸ್ತಾರ ರಾಷ್ಟ್ರವಾದ ಭಾರತದಲ್ಲಿ ಸ್ಥಳೀಯ ಸ್ವಯಂ ಆಡಳಿತ ಸಂಸ್ಥೆಗಳಿಗೆ ಅಧಿಕಾರದ ವಿಕೇಂದ್ರೀಕರಣವು ಕೆಳಗಿನ ಉದ್ದೇಶ್ಯಕ್ಕಾಗಿ ಅತ್ಯಾವಶ್ಯಕವಾದದ್ದು.

- ಸ್ಥಳೀಯ ಅಗತ್ಯಗಳಿಗೆ ವೇಗವಾಗಿ ಸ್ಪಂಧಿಸಲು ಸಾಧ್ಯತೆ
- ಹೆಚ್ಚಿನ ಹೊಣೆಗಾರಿಕೆ, ಪಾರದರ್ಶಕತೆ ಹಾಗೂ ಕಡಿಮೆ ಭ್ರಷ್ಟಾಚಾರ
- ಮೂಲಭೂತ ಸೇವೆಗಳ ಉತ್ತಮ ಪೂರೈಕೆ.
- ಸುಧಾರಿತ ಮಾಹಿತಿ ರವಾನೆ.
- ಹೆಚ್ಚು ಪರಿಸರ ಸ್ನೇಹಿ ಯೋಜನೆಗಳು.
- ಸಂಘರ್ಷ ಕರಗಿಸಲು ಹೆಚ್ಚಿನ ಶಕ್ತಿ.
- ಸ್ಥಳೀಯ ಪಣಗಾರರಲ್ಲಿ ಹೆಚ್ಚಿನ ಪ್ರೇರಣಾ ಶಕ್ತಿ ಹಾಗೂ ಉತ್ಸಾಹ
- ರಾಜಕೀಯ ಪ್ರಾತಿನಿಧ್ಯಕ್ಕೆ ವಿಸ್ತರಿಸಿದೆ ಅವಕಾಶ.

(ಮೂಲ : ಎಚ್.ಡಿ.ಆರ್. 2003, ಯೂ.ಎನ್.ಡಿ.ಪಿ)

### 1.2 74ನೇ ಸಂವಿಧಾನಾತ್ಮಕ ತಿದ್ದುಪಡಿ (74. ಸಿ.ಎ) ಅಥವಾ ನಗರಪಾಲಿಕಾ ಕಾಯಿದೆ (ವಿಧಿ) ಅಂದರೆ ಏನು?

1950 ರಲ್ಲಿ ಸಂವಿಧಾನದ ರಚನೆಯಾದಾಗ ಕೇವಲ ಎರಡು ಶ್ರೇಣಿ ಸರಕಾರ, ಕೇಂದ್ರ ಮತ್ತು ರಾಜ್ಯ ಸರಕಾರ, ಇವುಗಳಿಗೆ ಸಂವಿಧಾನಾತ್ಮಕ ಸ್ಥಾನಗಳು ಕೊಡಲ್ಪಟ್ಟವು. ಮೂರನೇ ಶ್ರೇಣಿಯ ಸ್ಥಳೀಯ ಸ್ವಯಂ ಸರಕಾರಗಳು, ಅಂದರೆ ನಗರಪಾಲಿಕೆಗಳು ಹಾಗೂ ಪಂಚಾಯತ್ ರಾಜ್ ಸಂಸ್ಥೆಗಳು ಮುಂತಾದವುಗಳಿಗೆ ಸಂವಿಧಾನಾತ್ಮಕ ಸ್ಥಾನವನ್ನು ಕೊಟ್ಟಿರಲಿಲ್ಲ. ಹೀಗೆ ಈ ಮಂಡಳಿಗಳಿಗೆ ಸ್ಥಿರತೆ ಇರಲಿಲ್ಲ. ಅವುಗಳು ರಾಜ್ಯ ಸರಕಾರಗಳ ಖಯ್ಯಾಲಿಯಂತೆ ಅಸ್ತಿತ್ವ ಹೊಂದಿ ಮತ್ತು ಕೆಲವೊಮ್ಮೆ ರದ್ದು ಪಡಿಸಲಾಗುತ್ತಿದ್ದವು ಮತ್ತು ರಾಜ್ಯ ಸರಕಾರಗಳು ಆಗ ಆಡಳಿತಾಧಿಕಾರಿ ಮೂಲಕ ಕಲಾಪಗಳನ್ನು ನಡೆಸುತ್ತಿದ್ದವು. 1992 ರಲ್ಲಿ ನಗರ ಪಾಲಿಕಾ ಕಾಯಿದೆ ನ್ಯಾಯಬದ್ಧವಾಗಿ ಜಾರಿಗೆ ಬಂದು ಈ ಸಂಸ್ಥೆಗಳನ್ನು ಸರಕಾರದ ಮೂರನೇ ಶ್ರೇಣಿಯಾಗಿ ಪರಿಗಣಿಸಲಾಯಿತು. ಮತ್ತು ಸಂವಿಧಾನಾತ್ಮಕ ಮೌಲ್ಯವನ್ನು ಹಾಗೂ ಸ್ಥಿರತೆಯನ್ನೂ ನೀಡಲಾಯಿತು.



ಸಮಾಜದಲ್ಲಿ ದುರ್ಬಲ ವರ್ಗದವರ ಸ್ಥಾನ ಖಾತ್ರಿಗೊಳಿಸಲು ಈ ಸಂಸ್ಥೆಗಳ ಮೂಲಕ ಅವರಿಗೊಂದು ದನಿ ದೊರಕಿತು. ಹೀಗಾಗಿ ಸಾಂಪ್ರದಾಯಿಕ ಅಧಿಕಾರದ ರಚನೆಯಲ್ಲಿ ಕೆಳಸ್ತರದಲ್ಲಿ ಬದಲಾವಣೆ ಬಂದಿತು. ಪರಿಶಿಷ್ಠ ಜಾತಿ ಹಾಗೂ ಪರಿಶಿಷ್ಠ ಗುಂಪುಗಳ ಜನಸಂಖ್ಯಾಧಾರಿತ ರೀತಿಯಲ್ಲಿ 74ನೇ ಸಂವಿಧಾನಾತ್ಮಕ ತಿದ್ದುಪಡಿ ಅನ್ವಯ ಸೀಟುಗಳಲ್ಲಿ ಹಾಗೂ ಸ್ಥಾನಗಳಲ್ಲಿ ಇವರಿಗೆ ಮೀಸಲಾತಿ ಒದಗಿಸಿತು. ಮಹಿಳೆಯರಿಗೆ ಶೇಕಡಾ 33.33 ಪ್ರಾತಿನಿಧ್ಯ, ಪರಿಶಿಷ್ಠ ಜಾತಿಯ ಕೋಟ ಹಾಗೂ ಸಾಮಾನ್ಯ ವರ್ಗಗಳೊಳಗಿನ ಕೋಟಾದಲ್ಲಿ ಕಾದಿರಿಸಲಾದ ಕಾರಣ ಸಾಕಷ್ಟು ಸಂಖ್ಯೆಯಲ್ಲಿ ಮಹಿಳೆಯರು ರಾಜಕೀಯ ಪ್ರಕ್ರಿಯೆಯಲ್ಲಿ ಭಾಗವಹಿಸಲು ಹಾಗೂ ಅಧಿಕಾರವನ್ನು ಪಡೆಯಲು ಸಹಾಯವಾಯಿತು.

ನಗರಪಾಲಿಕಾ ಕಾಯಿದೆ ಈ ಕೆಳಗಿನ ರೀತಿಯ ಉಪಕ್ರಮ ಸ್ಥಾಪನೆಗೆ ಆದೇಶ ನೀಡಿತು.

**ರಾಜ್ಯ ಚುನಾವಣಾ ಆಯೋಗ:** ಸ್ಥಳೀಯ ಸಂಸ್ಥೆಗಳಿಗೆ ನಿಯತ ಕಾಲದಲ್ಲಿ ಚುನಾವಣೆ ಆಗುವಂತೆ ಮೇಲ್ವಿಚಾರಿಸಲು ಮತ್ತು ಈ ಸಂಸ್ಥೆಗಳ ಸ್ಥಿರತೆಯನ್ನು ಖಾತ್ರಿಗೊಳಿಸಲು.

**ರಾಜ್ಯ ಹಣಕಾಸು ಆಯೋಗ:** ಕೇಂದ್ರ ಮತ್ತು ರಾಜ್ಯ ಸರಕಾರದ ಹಣಕಾಸಿನ ಹಂಚಿಕೆಯನ್ನು ನಿರ್ಧರಿಸಲು ಹಾಗೂ ತನ್ಮೂಲಕ ಸ್ಥಳೀಯ ಸಂಸ್ಥೆಗಳಿಗೆ ರಾಜ್ಯ ಹಾಗೂ ಕೇಂದ್ರ ಸರ್ಕಾರಗಳಿಂದರು ಸ್ವತಂತ್ರವಾಗಿ ತಮ್ಮ ಕಾರ್ಯ ನಿರ್ವಹಿಸಲು ನಿರ್ಧಿಷ್ಟವಾದ ಹಣದ ಆದಾಯ ಮೂಲಗಳನ್ನು ದೊರಕಿಸಿ ಕೊಡುವುದು.

**ಜಿಲ್ಲಾ ಯೋಜನಾ ಸಮಿತಿ:** ಅಭಿವೃದ್ಧಿ ಯೋಜನೆಗಳನ್ನು ರೂಪಿಸುವ ಪ್ರಕ್ರಿಯೆಯನ್ನು ವಿಕೇಂದ್ರಿಕರಣಗೊಳಿಸಲು. ಅದರಿಂದ ಆಯಾ ಸ್ಥಳೀಯ ಪ್ರದೇಶಕ್ಕೆ ಅನುಗುಣವಾಗಿ ಅಲ್ಲಿಯ ಸಮುದಾಯದ ನಾಗರಿಕರ ಕೊರತೆ ಅವಶ್ಯಕತೆಗಳನ್ನು ಬಿಂಬಿಸುವ ಕೆಳಗಿಂದ ರೂಪುಗೊಳ್ಳುವ ಯೋಜನೆಯನ್ನು ರೂಪಿಸಲು ಸಾಧ್ಯವಾಗುವುದು. ಮತ್ತು ಜಿಲ್ಲೆಯೊಳಗಿನ ನಗರ ಮತ್ತು ಹಳ್ಳಿಯ ಯೋಜನೆಗಳನ್ನು ಸಂಯೋಜಿಸಿ ಅವುಗಳ ನಡುವೆ ಮೂಲ ಸಂಪತ್ತುಗಳ ಹಂಚಿಕೆ ಮಾಡುವುದು.

**ಮುಖ್ಯ ಪಟ್ಟಣ ಯೋಜನಾ ಸಮಿತಿ:** [ಮೆಟ್ರೊ ಪೊಲಿಟನ್ ಪ್ಲಾನಿಂಗ್ ಕಮಿಟಿ (ಎಮ್.ಪಿ.ಸಿ)] ಹತ್ತು ಲಕ್ಷ ಅಥವಾ ಹೆಚ್ಚಿಗೆ ಇದ್ದ ಜನಸಂಖ್ಯೆಯ ಮುಖ್ಯಪಟ್ಟಣ ಪ್ರದೇಶಕ್ಕಾಗಿ (ಡ್ರಾಪ್ಟ್ ಡೆವಲಪ್ ಮೆಂಟ್ ಪ್ಲಾನ್) ತಯ್ಯಾರಿಸುವುದು.

ಕರ್ನಾಟಕದಲ್ಲಿ ರಾಜ್ಯ ಚುನಾವಣಾ ಆಯೋಗ (ಸ್ಟೇಟ್ ಇಲೆಕ್ಷನ್ ಕಮೀಷನ್) ಮತ್ತು ರಾಜ್ಯ ಹಣಕಾಸು ಆಯೋಗ (ಸ್ಟೇಟ್ ಫ್ಯಾನನ್ಸ್ ಕಮೀಷನ್) ಸ್ಥಾಪನೆಯಾದರೂ "ಡಿಸ್ಟ್ರಿಕ್ಟ್ ಪ್ಲಾನಿಂಗ್ ಕಮಿಟಿ" ಮತ್ತು ಮೆಟ್ರೋಪೊಲಿಟನ್ ಪ್ಲಾನಿಂಗ್ ಕಮಿಟಿ" ಇನ್ನು ಅಸ್ತಿತ್ವಕ್ಕೆ ಬರಬೇಕಾಗಿದೆ.

**1.3 74ನೇ ಸಂವಿಧಾನಾತ್ಮಕ ತಿದ್ದುಪಡಿಯಲ್ಲಿ ನಗರಪಾಲಿಕೆಯ ಅಧಿಕಾರ ಮತ್ತು ಕಾರ್ಯಾಚರಣೆ ಯಾವುದು ?**


74ನೇ ಸಂವಿಧಾನಾತ್ಮಕ ತಿದ್ದುಪಡಿಯು ನಗರಪಾಲಿಕೆಯನ್ನು ಒಂದು ಸ್ವಯಂ ಸರಕಾರದ ಪರಿಣಾಮಕಾರಿ ಸಂಸ್ಥೆ" ಯಂತೆ ಕಾರ್ಯ ನಿರ್ವಹಿಸಬೇಕೆಂದು ಇಚ್ಚಿಸುತ್ತದೆ. ನಗರಪಾಲಿಕೆಯ ಸಾಂಪ್ರದಾಯಿಕ ಸಂವಿಧಾನದ ಕಾರ್ಯಾಚರಣೆಯಾದ ಸಾರ್ವಜನಿಕ ಆರೋಗ್ಯ, ನೈರ್ಮಲ ತಾಜ್ಯವಸ್ತುಗಳ ಸಂಪೂರ್ಣ ವಿಲೇವಾರಿ, ಮೊದಲಿನಿಂದಲೂ ತಿಳಿದದ್ದೇ. ಆದರೆ ಈ 74ನೇ ತಿದ್ದುಪಡಿ ನಗರಪಾಲಿಕೆಗೆ ಈ ನಾಗರಿಕರ ಸೌಕಾರ್ಯಗಳನ್ನು ಒದಗಿಸುವುದಲ್ಲದೇ ಅದಕ್ಕಿಂತ ಹೆಚ್ಚಿನ ಕಾರ್ಯವ್ಯಾಪ್ತಿಯ ಕುರಿತು ಆಲೋಚಿಸುತ್ತದೆ ಮತ್ತು ಸ್ಥಳೀಯ ಅಭಿವೃದ್ಧಿಗಾಗಿ ನಿರ್ಣಾಯಕ ಪಾತ್ರ ವಹಿಸುತ್ತದೆ, ಅದರಲ್ಲೂ, ಸ್ಥಳೀಯ ಅಭಿವೃದ್ದಿಯೋಜನೆಗಳನ್ನು ರೂಪಿಸುವುದರಲ್ಲಿ ಹಾಗೂ ಅವುಗಳ ಅನುಷ್ಠಾನದಲ್ಲಿ, ವಿಶೇಷವಾಗಿ ನಗರದ ಬಡತನ ನಿರ್ಮೂಲನೆಗೆ ರಚಿಸಿರುವ ಯೋಜನೆಗಳನ್ನೂ ಸೇರಿದಂತೆ.

**1.4 12ನೇ ಅನುಸೂಚಿ ಪಟ್ಟಿ (ಶೆಡ್ಯೂಲ್) ಅಂದರೇನು?**

74ನೇ ತಿದ್ದುಪಡಿಯಲ್ಲಿ 12ನೇ ಅನುಸೂಚಿ ಪಟ್ಟಿಯಲ್ಲಿ (ಶೆಡ್ಯೂಲ್) ನಿಯಮಿಸಿದ ಅನುಬಂಧದಲ್ಲಿ ನಗರಪಾಲಿಕೆಯ ಕಾರ್ಯಾಚರಣೆಗೋಸ್ಕರ ಈ ಕೆಳಗಿನ ಸಲಹಾತ್ಮಕ ಪಟ್ಟಿಯನ್ನು ಗೊತ್ತುಪಡಿಸಲಾಗಿದೆ, ಆದರೆ ಅವುಗಳನ್ನು ಕಾರ್ಯರೂಪಕ್ಕೆ ತರುವುದನ್ನು ನಿರ್ಧಾರ ಮಾಡುವುದು ಆಯಾ ರಾಜ್ಯಕ್ಕೆ ಸೇರಿದ್ದು, ಅವುಗಳಲ್ಲಿ ಯಾವುದು ವಿವೇಚನೆಗೆ ಬಿಟ್ಟಿದ್ದು ಮತ್ತು ಯಾವುದು ಕಡ್ಡಾಯ ಎಂದು ತೀರ್ಮಾನಿಸಿ ನಗರಪಾಲಿಕೆಗೆ ವಹಿಸಿಕೊಡುವುದನ್ನು ಪ್ರತ್ಯೇಕ ರಾಜ್ಯ ಸರಕಾರಕ್ಕೆ ಬಿಟ್ಟುಬಿಟ್ಟಿತು.

1. ನಗರ ಯೋಜನೆ ಟೌನ ಪ್ಲಾನಿಂಗ್ ಸೇರಿ.
2. ಭೂಮಿಯ ಬಳಕೆಯ ನಿರ್ಬಂಧನೆ ಮತ್ತು ಕಟ್ಟಡ ನಿರ್ಮಾಣ.
3. ಆರ್ಥಿಕ ಮತ್ತು ಸಾಮಾಜಿಕ ಬೆಳವಣಿಗಾಗಿ ಯೋಜನೆ.
4. ರಸ್ತೆಗಳು, ಸೇತುವೆಗಳು.
5. ವಸತಿಗಳಿಗೆ ಮತ್ತು ಔದ್ಯೋಗಿಕ ಮತ್ತು ವಾಣಿಜ್ಯ ಉದ್ದೇಶಕ್ಕಾಗಿ ನೀರಿನ ಪೂರೈಕೆ.
6. ಸಾರ್ವಜನಿಕ ಆರೋಗ್ಯ, ನೈರ್ಮಲ್ಯೀಕರಣ, ಪಾಲನ ಮಂಡಳಿ, ತಾಜ್ಯವಸ್ತುಗಳ ಸಂಪೂರ್ಣ ವಿಲೇವಾರಿ.
7. ಅಗ್ನಿ ಶಾಮಕ ಸೇವೆಗಳು.
8. ನಗರ ಅರಣ್ಯ ರಕ್ಷಣೆ, ಪರಿಸರ ರಕ್ಷಣೆ ಮತ್ತು ಜೀವ ವಿಜ್ಞಾನ ಸಂಬಂಧಿ ಅವಶ್ಯಕ ಒತ್ತಾಸೆ.
9. ಸಮಾಜದಲ್ಲಿನ ದುರ್ಬಲ ವರ್ಗದವರ ಹಿತಾಸಕ್ತಿಯ ರಕ್ಷಣೆ, ಅಂಗವಿಕಲರ ಮತ್ತು ಮಾನಸಿಕ ದೌರ್ಬಲ್ಯರನ್ನು ಒಳಗೊಂಡು.
10. ಕೊಳೆಗೇರಿ ಅಭಿವೃದ್ಧಿ ಮತ್ತು ಸುಧಾರಣೆ.





11. ನಗರ ಬಡತನದ ನಿವಾರಣೆ.
12. ನಗರ ಸೌಕಾರ್ಯಗಳ ಪೂರೈಕೆ ಮತ್ತು ಉದ್ಯಾನವನಗಳು, ತೋಟಗಳು, ಆಟದ ಮೈದಾನುಗಳು ಮುಂತಾದ ಅನುಕೂಲತೆಗಳನ್ನು ಒದಗಿಸುವುದು.
13. ಸಾಂಸ್ಕೃತಿಕ, ಶೈಕ್ಷಣಿಕ ಮತ್ತು ರಸಾಭಿಜ್ಞತೆಯ ಅಂಶಗಳ ಉತ್ತೇಜನೆ.
14. ಶವ ಹೂಳಲು ಮೈದಾನ ಮತ್ತು ಶವಸಂಸ್ಕಾರ ಮತ್ತು ಅದಕ್ಕಾಗಿ ಭೂಮಿ ಮತ್ತು ವಿದ್ಯುತ್ ಚಿತಾಗಾರ.
15. ಪಶುಪ್ರಾಣಿಗಾಗಿ ದೊಡ್ಡಿಗಳು ಹಾಗು ಪ್ರಾಣಿ ಹಿಂಸೆಯ ತಡೆಗಟ್ಟುವಿಕೆ.
16. ಎಲ್ಲಾ ಅಂಕಿಅಂಶಗಳು, ಮರಣ ಮತ್ತು ಜನನ ಒಳಗೊಂಡು.
17. ಸಾರ್ವಜನಿಕ ಸೌಕರ್ಯಗಳು, ಬೀದಿ ದೀಪಗಳು, ವಾಹನ ನಿಲುಗಡೆ ಸ್ಥಳ, ಬಸ್ ನಿಲ್ದಾಣ ಮತ್ತು ಸಾರ್ವಜನಿಕ ಅನುಕೂಲತೆಗಳು ಸೇರಿದಂತೆ.
18. ಪ್ರಾಣಿವಧೆಯ ಹಾಗೂ ಚರ್ಮ ಹದ ಮಾಡುವ ಕಾರ್ಖಾನೆಗಳ ನಿಯಂತ್ರಣ.

ಮುಖ್ಯವಾದದ್ದು ಏನೆಂದರೆ ಕರ್ನಾಟಕ ಮುನ್ಸಿಪಲ್ ಕಾರ್ಪೋರೇಷನ್ (ಕೆ.ಎಂ.ಸಿ) (ಅಮೆಂಡ್‌ಮೆಂಟ್) ಕಾಯಿದೆ 74ನೇ ತಿದ್ದುಪಡಿ ಜತೆ ಹೊಂದಿಕೆ ತರಲು ಈ ಕೆಲವು ಹೊಸ ಕಾರ್ಯಗಳನ್ನು ಸೇರ್ಪಡೆ ಮಾಡಿದೆ. ಅವು ಕೊಳಗೇರಿ ಅಭಿವೃದ್ಧಿ ಮತ್ತು ಸುಧಾರಣೆ, ನಗರ ಅರಣ್ಯಗಳು, ಪರಿಸರ ರಕ್ಷಣೆ ಮತ್ತು ಜೈವಿಕ ಅಂಶಗಳ ಉತ್ತೇಜನ, ನಗರ ಬಡತನದ ನಿವಾರಣೆ ಮತ್ತು ಸಾಂಸ್ಕೃತಿಕ, ಶೈಕ್ಷಣಿಕ ಮತ್ತು ರಸಾಭಿಜ್ಞತೆಯ ಅಂಶಗಳ ಪ್ರೋತ್ಸಾಹ, ಇವುಗಳು ನಗರಪಾಲಿಕೆಯ ಸ್ವಂತ ವಿವೇಚನೆಗೆ ಬಿಟ್ಟಿದ್ದು, ಮಾಡಲೇ ಬೇಕಾದ ನಿಬಂಧನೆ ಇಲ್ಲ.

ಇದೂ ಅಲ್ಲದೇ, ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿ ಗೋಸ್ಕರ ಯೋಜನೆ ಮತ್ತು ಸಮಾಜದ ದುರ್ಬಲ ವರ್ಗದವರು ಅಂಗವಿಕಲರು, ಮತ್ತು ಬುದ್ಧಿಮಂದ್ಯರನ್ನು ಒಳಗೊಂಡಂತೆ, ಇವರೆಲ್ಲರ ಹಿತಾಸಕ್ತಿ ರಕ್ಷಣೆ 12ನೇ ಅನುಸೂಚಿ ಪಟ್ಟಿ (schedule) ಯಲ್ಲಿದ್ದಂತೆ, ನಗರಪಾಲಿಕೆಯ ಕಾರ್ಯವ್ಯಾಪ್ತಿಯ ಪಟ್ಟಿಯಲ್ಲಿ ಅವುಗಳನ್ನು ಸೇರಿಸಿಯೇ ಇಲ್ಲ.

ಇದಲ್ಲದೇ, ಈ ಪಟ್ಟಿಯಲ್ಲಿರುವ ಕಾರ್ಯಗಳನ್ನು ನಗರ ಸ್ಥಳೀಯ ಸಂಸ್ಥೆಗಳಿಗೆ ಮಾತ್ರ ಮೀಸಲಾಗಿಡದೆ, ರಾಜ್ಯ ಸರ್ಕಾರವು ಸಹಾ ಈ ಕಾರ್ಯಗಳ ಮೇಲೆ ಅದೇ ಸಮನಾದ ಅಧಿಕಾರ ಹೊಂದಿರುತ್ತದೆ. ಆದ ಕಾರಣ, "ಕೆಳಮಟ್ಟದಲ್ಲಿ ಏನನ್ನು ಮಾಡಲು ಸಾದ್ಯವೊ ಅದನ್ನು ಆ ಮಟ್ಟದಲ್ಲೇ ಮಾಡುವುದು ಉತ್ತಮ" ಎನ್ನುವ ತತ್ವವನ್ನು ಕೈ ಬಿಡಲಾಗಿದೆ.

ಅಷ್ಟೇ ಅಲ್ಲದೆ ಕರ್ನಾಟಕ ಮಹಾನಗರ ಪಾಲಿಕೆ (ತಿದ್ದುಪಡಿ) ಕಾಯಿದೆ (KMC) (Amdt.) (Act) ಯಡಿ, ಈ ತನಕ ಈ ಕಾರ್ಯಗಳನ್ನು ರಾಜ್ಯ ಸರ್ಕಾರದ ವಿವಿಧ ಇಲಾಖೆಗಳಡಿಯಲ್ಲಿ ನೆರವೇರಿಸುತ್ತಿದ್ದ ಅಧಿಕಾರಿಗಳನ್ನು ತಂದಿಲ್ಲ. ಇದೇ ರೀತಿ, (ಪ್ಯಾರಾ ಸ್ಟೇಟಲ್) ಅರೇ ಸರ್ಕಾರಿ ಸಂಸ್ಥೆಗಳಾದಂಥ ಬೆಂಗಳೂರು ನೀರು ಸರಬರಾಜು ಹಾಗೂ ಒಳಚರಂಡಿ ಮಂಡಲಿ (BWSSB), ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (BDA), ಬೆಂಗಳೂರು ಮುಖ್ಯ ಪಟ್ಟಣ ಪ್ರಾದೇಶಿಕ ಅಭಿವೃದ್ಧಿ ಪ್ರಾಧಿಕಾರ (BMRDA), ಮುಂತಾದ ಸಂಸ್ಥೆಗಳ ಅಧಿಕಾರಿಗಳನ್ನು ನಗರಪಾಲಿಕೆಯಡಿ ತಂದಿಲ್ಲ. ಆದಕಾರಣ ನಗರಪಾಲಿಕೆಗಳಿಗೆ 12ನೇ ಅನುಸೂಚಿ ಪಟ್ಟಿಯಲ್ಲಿ ವಹಿಸಲಾಗಿರುವ ಎಲ್ಲ ಕಾರ್ಯಾಚರಣೆಗಳನ್ನು ಸಮರ್ಪಕವಾಗಿ ನಡೆಸಲು ಸಾಧ್ಯವಾಗುತ್ತಿಲ್ಲ.

### 1.5 ವಾರ್ಡ್ ಸಮಿತಿ ಅಂದರೇನು ?

ಬಹುದೊಡ್ಡ ಪಟ್ಟಣಗಳಲ್ಲಿ, ನಗರದ ನಾಗರೀಕರಿಗೆ ನಗರಪಾಲಿಕೆ ಕೂಡಾ ನಿಲುಕದಷ್ಟು ದೂರದ ಸಂಸ್ಥೆಯಾಗಿರಬಹುದೆಂದು ಗಮನಿಸಿ, ನಗರಪಾಲಿಕೆ ಕಾಯಿದೆಯು, ವಾರ್ಡ್ ಸಮಿತಿಗಳೆಂಬ ಸ್ಥಳೀಯ ವಸತಿ ಸಮಿತಿಗಳ ರಚನೆಯನ್ನು ಆದೇಶಿಸಿದೆ. ಈ ಸಮಿತಿಗಳು ಆಯಾ ವಸತಿಗಳಲ್ಲಿ ನಗರಪಾಲಿಕೆಯ ಹೆಚ್ಚಿನ ಕೆಲಸಗಳನ್ನು ನಿರ್ವಹಿಸಬೇಕಂದು ಹೇಳಿದೆ. ಕಾಯಿದೆ ಮೂರು ಲಕ್ಷಕ್ಕಿಂತ ಹೆಚ್ಚಿನ ಜನಸಂಖ್ಯಾ ಬಾಹುಳ್ಯವಿದ್ದ ನಗರಗಳಲ್ಲಿ, ವಾರ್ಡ್ ಸಮಿತಿಗಳ ರಚನೆಯಾಗಬೇಕೆಂದಿದೆ. ಮೂರು ಲಕ್ಷಕ್ಕಿಂತ ಕಡಿಮೆ ಜನಸಂಖ್ಯೆ ಇರುವ ನಗರಗಳಲ್ಲೂ ಇಂತಹ ಸಮಿತಿಗಳ ರಚನೆಗೆ ಯಾವುದೇ ತಡೆ ಇರುವುದಿಲ್ಲ.

74ನೇ ಸಂವಿಧಾನಾತ್ಮಕ ತಿದ್ದುಪಡಿಯು ವಾರ್ಡ್ ಸಮಿತಿಗಳನ್ನು ಪ್ರತಿಯೊಂದು ವಾರ್ಡ್‌ಗಾದರೂ ಅಥವ ಹಲವು ವಾರ್ಡ್‌ಗಳ ಸಮೂಹಕ್ಕಾದರೂ ರಚಿಸುವ ಹಕ್ಕನ್ನು ರಾಜ್ಯ ಸರ್ಕಾರಗಳಿಗೆ ನೀಡಿದೆ.

ಹಾಗೇನೇ, ಅದರ ಸಂಯೋಜನೆ, ಸ್ಥಳಿಕ ಎಲ್ಲೆಯ ವ್ಯಾಪ್ತಿ ಮತ್ತು ವಾರ್ಡ್ ಸಮಿತಿಯ ಸೀಟುಗಳನ್ನು ಭರ್ತಿ ಮಾಡುವ ರೀತಿ ಅದೆಲ್ಲವನ್ನೂ ರಾಜ್ಯ ಸರಕಾರಕ್ಕೆ ಬಿಟ್ಟಿದೆ. ಹಾಗಿದ್ದರೂ, ವಾರ್ಡ್‌ಗಳನ್ನು ಸಮಿತಿಯನ್ನು ಪ್ರತಿನಿಧಿಸುವ ನಗರಪಾಲಿಕಾ ಸದಸ್ಯರು, ಅವರ ವ್ಯಾಪ್ತಿಯ ವಾರ್ಡ್ಸ್ ಸಮಿತಿಯ ಎಕ್ಸ್–ಆಫಿಸಿಯೋ ಸದಸ್ಯರುಗಳಾಗಿ ಅಂದರೆ ಮಂಡಳಿಯ ಅಧಿಕಾರಯುಕ್ತ ಸದಸ್ಯರುಗಳಾಗಬೇಕು ಮತ್ತು ಚುನಾವಣೆ ನಡೆಸಿ ವಾರ್ಡ ಸಮಿತಿ ಅಧ್ಯಕ್ಷರ ಸ್ಥಾನವನ್ನು ಭರಿಸಬೇಕು.

| | |
|---|---|
| 5 ಅಕ್ಟೋಬರ್ 1994 | ಹೊಂದಾಣಿಕೆ ಶಾಸನ (ಕನ್‌ಫಾರ್ಮಿಟಿ ಲೆಜಿಸ್ಲೇಶನ್) ಕರ್ನಾಟಕ ಮಹಾನಗರ ಪಾಲಿಕೆ [(ತಿದ್ದುಪಡಿ) ಕುದೆ ಕರ್ನಾಟಕ ಮುನ್ಸಿಪಲ್] ಕಾರ್ಪೋರೇಷನ್ಸ್ (ಅಮೆಂಡ್‌ಮೆಂಟ್) ಆಕ್ಟ್ ] 1994 |
| 16 ಮಾರ್ಚ್ 1998 | ಕರ್ನಾಟಕ ಮುನ್ಸಿಪಲ್ ಕಾರ್ಪೋರೇಷನ್ (ವಾರ್ಡ್ ಕಮಿಟಿ) ರೂಲ್ಸ್ 1997 (ಗೆಜೆಟೆಡ್) |
| 16 ಜನವರಿ 1999 | ಬೆಂಗಳೂರು ಮಹಾನಗರ ಪಾಲಿಕಾದಲ್ಲಿ 28 ವಾರ್ಡ್ ಸಮಿತಿಯ ಸ್ಥಾಪನೆಯ ಸಭೆ (ಚೇರ್ ಪರ್ಸನ್) ಅಧ್ಯಕ್ಷರನ್ನು ಚುನಾಯಿಸಲು |

| | |
|---|---|
| ನವೆಂಬರ್ 2001 | ಮೊದಲನೇ ವಾರ್ಡ್ ಸುತಿ ಅವಧಿಯ ಅಂತ್ಯ – ಚುನಾವಣೆ ಮೂಲಕ ಹೊಸ ಕೌನ್ಸಿಲ್ ರಚನೆ. |
| ಜುಲೈ 2003 | ಹೊಸ ವಾರ್ಡ್ ಸುತಿಯ ಸ್ಥಾಪನೆ |
| ಜನವರಿ 2004 | ಹೊಸ ಅಧ್ಯಕ್ಷರ ಚುನಾವಣೆ |
| ಮಾರ್ಚ 2004 | ಕೋಡ್ ಆಫೆ ಸಾರ್ವಜನಿಕ ಚುನಾವಣೆಂದ "ಧಿಸಲಾದ 'ಕೋಡ್ ಆಫ್ ಕಾಂಡಕ್ಟ್' ಕಾರಣ ವಾರ್ಡ್ ಸುತಿ ಸಭೆಗಳು ಸ್ಥಗಿತ |

### 1.6 ಕರ್ನಾಟಕದಲ್ಲಿ ವಾರ್ಡ್ಸ್ ಸಮಿತಿಗಳು _ ಘಟನೆಗಳ ಕಾಲ ಸೂಚಿ

### 1.7 ಕರ್ನಾಟಕದಲ್ಲಿ ವಾರ್ಡ್ಸ್ ಸಮಿತಿಗಳ ಸಂಯೋಜನೆ ಹೇಗೆ ? ಯಾವ ರೀತಿ ನಿಯೋಜಿಸಲಾಗುತ್ತಿದೆ ?

ಕೆ.ಎಮ್.ಸಿ. ಕಾಯಿದೆ ಅಡಿಯ ವಾರ್ಡ್ ಸಮಿತಿ ನಿಯಮದ ಪ್ರಕಾರ ನಗರಪಾಲಿಕೆ ಮಂಡಲಿ ರಚನೆಯಾದ ಒಂದು ತಿಂಗಳ ಒಳಗಡೆ ವಾರ್ಡ್ ಸಮಿತಿ ನಿಯೋಜಿಸಬೇಕು.

**ಕೆ.ಎಮ್.ಸಿ. ಕಾಯಿದೆಯ ಸೆಕ್ಷನ್ 13 ಪ್ರಕಾರ, ವಾರ್ಡ್ ಸಮಿತಿಯಲ್ಲಿ :**

- ಮಹಾನಗರ ಪಾಲಿಕೆಯ ಸದಸ್ಯರು ತಮ್ಮ ತಮ್ಮ ವಾರ್ಡ್‌ನ್ನು ಪ್ರತಿನಿಧಿಸುತ್ತಾರೆ ಮತ್ತು,
- ಐದಕ್ಕಿಂತ ಹೆಚ್ಚಿರದ ವ್ಯಕ್ತಿಗಳು, ಯಾರಿಗೆ ನಗರಪಾಲಿಕೆಯ ಆಡಳಿತದ ಬಗ್ಗೆ ಅನುಭವ ಮತ್ತು ಜ್ಞಾನವಿದೆಯೋ, ಅವರು ರಾಜ್ಯ ಸರ್ಕಾರದಿಂದ ನೇಮಕಗೊಳ್ಳುತ್ತಾರೆ.
- ಎರಡಕ್ಕಿಂತ ಹೆಚ್ಚಿರದ ಇಬ್ಬರು ಸದಸ್ಯರುಗಳನ್ನು ವಾರ್ಡ್ ಸಮಿತಿ ವ್ಯಾಪ್ತಿಯ ಪ್ರದೇಶದಲ್ಲಿನ ಸರ್ಕಾರೇತ ಸಂಸ್ಥೆಗಳಿಂದ ಮತ್ತು ನಾಗರೀಕರ ಸಂಘಗಳಿಂದ ಅನುಭವಿಗಳನ್ನು ಈ ಉದ್ದೇಶಕ್ಕೆ ಸರಕಾರವು ನೇಮಿಸಲು ನಿರ್ದೇಶನ ಮಾಡುತ್ತದೆ.


### 1.8 ಕರ್ನಾಟಕದಲ್ಲಿ ಪ್ರತಿ ಮಹಾನಗರ ಪಾಲಿಕೆಗಳಲ್ಲಿ ಎಷ್ಟು ವಾರ್ಡ್ಸ್ ಸಮಿತಿಗಳಿವೆ?

ವಾರ್ಡ್ ಸಮಿತಿ ನಿಯಮದ ಸೆಕ್ಷನ್ 3ರ ಪ್ರಕಾರ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ 30 ವಾರ್ಡ್ ಸಮಿತಿಗಳನ್ನು ಮೀರುವಂತಿಲ್ಲ. ಕರ್ನಾಟಕದ ಇತರ ಐದು ಮಹಾನಗರ ಪಾಲಿಕೆಗಳಲ್ಲಿ ಎಂದರೆ, ಬೆಳಗಾಂ, ಗುಲಬರ್ಗಾ, ಹುಬ್ಬಿ – ಧಾರವಾಡ, ಮೈಸೂರು, ರಾಯಚೂರು ಮುಂತಾದಲ್ಲಿ 20 ವಾರ್ಡ್ ಸಮಿತಿಗಳನ್ನು ಮೀರುವಂತಿಲ್ಲ. ಆದರೆ ಇಷ್ಟರ ವರೆಗೆ ಕೇವಲ ಬೆಂಗಳೂರು ನಗರದಲ್ಲಿ ಮಾತ್ರ ವಾರ್ಡ್ ಸಮಿತಿಗಳು ಸ್ಥಾಪನೆಯಾಗಿವೆ.




ಬೆಂಗಳೂರು ಮಹಾನಗರದಲ್ಲಿ ಒಟ್ಟು 100 ವಾರ್ಡ್ಸ್‌ಗಳಿದ್ದು 30 ವಾರ್ಡ್ಸ್ ಸಮಿತಿಗಳಿವೆ. ಒಂದು ವಾರ್ಡ್ಸ್ ಸಮಿತಿಯ ವ್ಯಾಪ್ತಿಯಲ್ಲಿ 3–4 ವಾರ್ಡ್‌ಗಳು ಬರುತ್ತವೆ.

### 1.9 ಬೆಂಗಳೂರಿನ ಪ್ರತೀ ವಾರ್ಡ್ಸ್ ಸಮಿತಿಯ ರಚನೆ ಹೇಗೆ ?




| | |
|---|---|
| ಪ್ರತೀ ವಾರ್ಡ್ಸ್ ಸ'ುತಿಯಲ್ಲಿ ಚುನಾುತ ಸದಸ್ಯರ ಸಂಖ್ಯೆ | 3–4 |
| ನೇ'ುಸಲಾದ ಸದಸ್ಯರ ಸಂಖ್ಯೆ | 5 |
| ಸರ್ಕಾರೇತ ಸಂಸ್ಥೆ / ನಾಗರೀಕರ ಸಂಸ್ಥೆಗಳಿಂದ (ಎನ್.ಜಿ.ಓ / ಸಿ.ಬಿ.ಓ ಗಳಿಂದ) ಆರಿಸಲಾದ ಸದಸ್ಯರ ಸಂಖ್ಯೆ | 2 |
| ಒಟ್ಟು ನೇ'ುಸಿದ ಸದಸ್ಯರ ಸಂಖ್ಯೆ | 7 |
| ಪ್ರತೀ ವಾರ್ಡ್ಸ್ ಸುತಿಯಲ್ಲಿ ಒಟ್ಟು ಸದಸ್ಯರ ಸಂಖ್ಯೆ | 10–11 |
| ಒಟ್ಟು 30 ವಾರ್ಡ್ಸ್ ಕಮಿಟಿಯಲ್ಲಿ ನೇಮಿಸಿದ ಸದಸ್ಯರ ಸಂಖ್ಯೆ | 210 |

### 1.10 ವಾರ್ಡ್ಸ್ ಸಮಿತಿಯ ಕಾರ್ಯಾಚರಣೆಗಳು ಯಾವುವು ?



ಎ. ತ್ಯಾಜ್ಯವಸ್ತುಗಳ ನಿರ್ಮೂಲನೆ ಮತ್ತು ವಿಲೇವಾರಿ

ಬಿ. ಸಾರ್ವಜನಿಕ ಸ್ಥಳಗಳಲ್ಲಿ ಮತ್ತು ರಸ್ತೆಯಲ್ಲಿ ಮಳೆಯಿಂದ ಅಥವಾ ಇತರ ಕಾರಣಗಳಿಂದ ನೀರು ಶೇಖರವಾಗಿದ್ದರೆ ಅದನ್ನು ಚೊಕ್ಕಟ ಮಾಡುವುದು.

ಸಿ. ಆರೋಗ್ಯ , ಲಸಿಕೆ ಹಾಕುವ ಸೇವೆಗಳು.

ಡಿ. ಕೊಳೆಗೇರಿಯ ಅಭಿವೃದ್ಧಿ ಮತ್ತು ಕಾನೂನಿನ್ವಯದಂತೆ ಎಲ್ಲೆಲ್ಲಿ ಸಾಧ್ಯವೋ ಅಲ್ಲಲ್ಲಿ ನಿರ್ಮೂಲನೆ.

ಇ. ವಾರ್ಡ್ ಸಮಿತಿಯ ವ್ಯಾಪ್ತಿಗೆ ಸಂಬಂಧ ಪಟ್ಟ ಹಾಗೆ ಸಾರ್ವಜನಿಕರ ಕುಂದುಕೊರತೆಗಳನು ಪರಿಹರಿಸುವುದು.

ಎಫ್. ಆಗತ್ಯವಾದ ಅಂಕಿ–ಸಂಖ್ಯೆಗಳ (ಸ್ಟೆಟಿಸ್ಟಿಕ್ಸ್) ಸಂಗ್ರಹಣೆ.

ಜಿ. ವಾರ್ಡ್ ಸಮಿತಿಗೆ ಗೊತ್ತು ಮಾಡಿದ ಕಾರ್ಯಚರಣೆಗೆ ಅನ್ವಯ ಜನರ ಪಾಲುಗಾರಿಕೆಗಾಗಿ ಜನರನ್ನು ಸಂಘಟಿಸುವುದು.

ಎಚ್. ರಸ್ತೆ ಮತ್ತು ಮನೆಗಳಿಗೆ ಸಂಖ್ಯೆ ನೀಡುವುದು.

ಐ. ಇಷ್ಟಲ್ಲದೇ ಇತರ ಕಾರ್ಯಗಳನ್ನು ಮಹಾನಗರ ಪಾಲಿಕೆ ಒಪ್ಪಿಸಿದಂತೆ ಮಾಡುವುದು.

2. ವಾರ್ಡ್ ಸಮಿತಿಗಳು ಮಹಾನಗರ ಪಾಲಿಕೆ ಹಾಗೂ ಸ್ಥಾಯಿಸಮಿತಿಗಳ ನಿರ್ಣಯಗಳನ್ನು ಆಯಾ ಕ್ಷೇತ್ರಕ್ಕೆ (ರೇಂಜ್) ಸಂಬಂಧಿಸಿದಂತೆ ಆಚರಣೆಗೆ ತರುವುದು, ಜಾರಿಗೊಳಿಸುವುದು ಹಾಗೂ ಮೇಲ್ವಿಚಾರಣೆ ಮಾಡುವುದು.

3. ಇದೂ ಅಲ್ಲದೇ ವಾರ್ಡ್ ಸಮಿತಿಗಳು ಈ ಕೆಳಗಿನ ಕಾರ್ಯಗಳ ಮೇಲ್ವಿಚಾರಣೆ ಮತ್ತು ಉಸ್ತುವಾರಿ ಮಾಡುವುದು.

ಎ. ಸೂಕ್ತ ಸಮಯದಲ್ಲಿ ಆಸ್ತಿ ತೆರಿಗೆ ಮೊತ್ತ ಗೊತ್ತು ಮಾಡುವುದು ಹಾಗೂ ವಸೂಲಿ ಮಾಡುವುದು, ಜಾಹಿರಾತು ತೆರಿಗೆ, ಬಾಡಿಗೆ, ಶುಲ್ಕ ಮತ್ತು ಮಹಾನಗರ ಪಾಲಿಕೆಗೆ ಲಭಿಸಬೇಕಾದ ಇತರ ಆದಾಯಗಳು.

ಬಿ. ಮುಂಗಡ ಪತ್ರದ ಕೊಡುಗೆಯ ಉಪಯೋಗ ಮತ್ತು ಲೆಕ್ಕ ಶೋಧನೆ ನೆರವೇರಿಸುವುದು.

ಸಿ. ರಸ್ತೆಗಳ ರಿಪೇರಿ ಮತ್ತು ಸಂರಕ್ಷಣೆ

ಡಿ. ಲೋಕೋಪಯೋಗಿ ಕೆಲಸಗಳನ್ನು ನೆರವೇರಿಸುವುದು.

ಇ. ಪರವಾನಗಿ (ಲೈಸೆನ್ಸು)ಗಳನ್ನು ನೀಡುವುದು

ಎಫ್. ಸಾರ್ವಜನಿಕ ಆರೋಗ್ಯ ಮತ್ತು ನೈರ್ಮಲ್ಯ ಕಾಪಾಡುವುದು.

ಜಿ. (ಭಯಂಕರ) ಅಪಾಯಕರ ರೋಗಗಳ ನಿಯಂತ್ರಣ ಮತ್ತು ತಡೆಗಟ್ಟುವಿಕೆ.

ಎಚ್. ಶವ ಹೂಳಲು ಅಥವಾ ಸಂಸ್ಕಾರ ಮಾಡಲು ಅನುಮತಿ ಪತ್ರ ನೀಡುವುದು.

ಐ. ಜನನ ಮತ್ತು ಮರಣದ ದಾಖಲೆ ಪತ್ರ

ಜೆ. ಕೇಂದ್ರ ಮತ್ತು ರಾಜ್ಯ ಸರಕಾರದ ನಗರ ಬಡತನ ನಿವಾರಣೆ ಯೋಜನೆಗಳ ಅನುಷ್ಠಾನ.

ಕೆ. ಮಹಾನಗರ ಪಾಲಿಕೆಯ ಆಸ್ತಿಗಳಲ್ಲಿ ಮರ ನೆಡುವ ಯೋಜನೆ

ಎಲ್. ಮಹಾನಗರ ಪಾಲಿಕೆಗೆ ಸಂಬಂಧಿಸಿದ ಆಸ್ತಿ, ಉದ್ಯಾನವನ, ಕೆರೆಗಳು ಮುಂತಾದವುಗಳ ಉಸ್ತುವಾರಿ.



ಎಮ್. ಮಹಾನಗರ ಪಾಲಿಕೆಗಳು ವಾರ್ಡ್ ಸಮಿತಿಗಳಿಗೆ ಇಂತಹ ಕಾರ್ಯ ಮಾಡಬೇಕೆನ್ನುವ ಬಗ್ಗೆ ಆದೇಶ ನೀಡಿದಾಗ, ವಾರ್ಡ್ ಸಮಿತಿಗಳು ಅವುಗಳನ್ನು ನಿರ್ವಹಿಸತಕ್ಕದ್ದು.

ಎನ್. ಮಹಾನಗರ ಪಾಲಿಕೆ, ಸಂಧರ್ಭಾನುಸಾರ ವಾರ್ಡ್ ಸಮಿತಿಯ ಯಾವುದೇ ನಡವಳಿಕೆಯ ಪ್ರತಿ ಅಥವಾ ಮಾಹಿತಿ ಪತ್ರಿಕೆ, ಲೆಕ್ಕ ಪತ್ರಗಳ ಪ್ರತಿ, ಕಾರ್ಯಾಚರಣೆಗಳ ಬಗ್ಗೆ ವರದಿ, ಇವು ಯಾವುದನ್ನಾದರೂ ಕೇಳಬಹುದು, ಮಾರ್ಪಡಿಸಬಹುದು ಅಥವಾ ರದ್ದುಮಾಡಬಹುದು.

ಎಷ್ಟೆಂದರೂ ಈ ನಿಯಮಗಳು ವಾರ್ಡ್ ಸಮಿತಿಗಳಿಗೆ ಸ್ಪಷ್ಟವಾದ ಅಧಿಕಾರಗಳನ್ನು ನಿಯೋಜಿಸಿಲ್ಲ ಮತ್ತು ಈ ಎಲ್ಲ ಕೆಲಸಗಳನ್ನು ನಿರ್ವಹಿಸಲು ಕಾರ್ಯ ವಿಧಾನಗಳ ಬಗ್ಗೆ ನಿಯಮಾವಳಿಗಳಿಲ್ಲ.

### 1.11 ವಾರ್ಡ್ ಸಮಿತಿಯ ಹಣಕಾಸು ಆಡಳಿತ

- ವಾರ್ಡ್ ಸಮಿತಿಯ ನಿಯಮಗಳು ವಾರ್ಡ್ ಸಮಿತಿಗೆ ಒಪ್ಪಿಸಿರುವ 22 ಕರ್ತವ್ಯಗಳನ್ನು ಪೂರೈಸಲು ಬೇಕಾಗಿರುವ ಹಣದ ಮೊತ್ತವನ್ನು ಒದಗಿಸುವುದಿಲ್ಲ / ವರ್ಗಾಯಿಸುವುದಿಲ್ಲ.
- ವಾರ್ಡ್ ಸಮಿತಿ ನಿಯಮಗಳು ಬೆಂಗಳೂರು ಮಹಾನಗರ ಪಾಲಿಕೆಗೆ ವರ್ಷದಲ್ಲಿ ಒಂದು ಲಕ್ಷ ರೂಪಾಯಿಗಳನ್ನು ಮೀರದ ಅಂದಾಜು ವೆಚ್ಚಗಳ ಕಾರ್ಯಗಳಿಗೆ ಆಡಳಿತಾತ್ಮಕ ಮಂಜೂರಾತಿಯನ್ನು ನೀಡುವ ಅಧಿಕಾರವನ್ನು ಕೊಟ್ಟಿದೆ. ಹಾಗೂ ಇತರ ಮಹಾ ನಗರ ಪಾಲಿಕೆಗಳಿಗೆ ಈ ಮಿತಿಯನ್ನು ರೂಪಾಯಿ ಐವತ್ತು ಸಾವಿರಕ್ಕೆ ಸೀಮಿತಗೊಳಿಸಲಾಗಿದೆ.
- ವಾರ್ಡ್ ಸಮಿತಿಗಳಿಗೆ ತಮ್ಮದೇ ಆದ ಶುಲ್ಕ ಅಥವಾ ತೆರಿಗೆ ವಿಧಿಸುವ ಅಧಿಕಾರವಿರುವುದಿಲ್ಲ.

### 1.12 ವಾರ್ಡ್ ಸಮಿತಿಗಳ ಸಭೆಗಳು :



ವಾರ್ಡ್ ಸಮಿತಿಯ ನಿಯಮಗಳು ಈ ಕೆಳಗಿನಂತೆ ಆದೇಶಿಸುತ್ತದೆ :


- ಸಭೆಗಳು ತಿಂಗಳಿಗೊಮ್ಮೆ ನಡೆಯಬೇಕು.
- ಅಧ್ಯಕ್ಷರು (ಚೇರ್‌ಮೇನ್) ಸಭೆಯ ಸ್ಥಳವನ್ನು ಹಾಗೂ ದಿನಾಂಕ ಮತ್ತು ಸಮಯವನ್ನು ನಿಗದಿ ಪಡಿಸಬೇಕು. ಸಹಾಯಕ ಕಂದಾಯ ಅಧಿಕಾರಿ (ಎ.ಆರ್.ಓ) ಸಭೆಯ ಸೂಚನಾ ಪತ್ರಗಳನ್ನು ಕಳುಹಿಸಬೇಕು.
- ಸಭೆಯ ಸೂಚನಾ ಪತ್ರಗಳು ಏಳು ದಿನಗಳ ಮುಂಚಿತವಾಗಿ ಕಳುಹಿಸಬೇಕು; ನಡಾವಳಿಗಳು ವಾರ್ಡ್ ಸಮಿತಿ ತೆಗೆದುಕೊಂಡ ನಿರ್ಣಯಗಳನ್ನು ಪ್ರತಿಬಿಂಬಿಸಬೇಕು.
- ನಡಾವಳಿಗಳನ್ನು ಸಾರ್ವಜನಿಕರು ರೂ.10.00 ಕೊಟ್ಟು ಓದಿಕೊಳ್ಳುವಂತಿರಬೇಕು.

### 1.13 ಮಹಾನಗರ ಪಾಲಿಕೆ ಹಾಗೂ ವಾರ್ಡ್ ಸಮಿತಿ ನಡುವೆ ಸಮನ್ವಯ :

ಮಹಾನಗರ ಪಾಲಿಕೆಯ ಆಯುಕ್ತರು ವಾರ್ಡ್ ಸಮಿತಿಗೆ ಈ ಕೆಳಕಂಡ ಮಾಹಿತಿಗಳನ್ನು ಲಭ್ಯವಾಗುವಂತೆ ಮಾಡಬೇಕು:

- ಸ್ಥಾಯಿ ಸಮಿತಿಯ ನಿರ್ಣಯಗಳು
- ಮಹಾನಗರ ಪಾಲಿಕೆಯ ತೀರ್ಮಾನಗಳು
- ಪ್ರತ್ಯೇಕ ವಾರ್ಡ್‌ಗಳಿಗೆ ಹಣಕಾಸು ಹಂಚುವಿಕೆ.
- ವಾರ್ಡ್ ನಕ್ಷೆಗಳ ಪ್ರತಿಗಳು.
- ಪ್ರತ್ಯೇಕ ವಾರ್ಡ್‌ಗಳ ಆಸ್ತಿ ವಿವರ

### 1.14 ವಾರ್ಡ್ಸ್ ಸಮಿತಿ ಮತ್ತು ಅಧ್ಯಕ್ಷರ ಅಧಿಕಾರಗಳು :





- ಒಂದು ವಾರ್ಡ್ ಸಮಿತಿ ಅಧ್ಯಕ್ಷರಿಗೆ ಆ ವಾರ್ಡ್‌ಗೆ ಸಂಬಂಧಿಸಿದ ಯಾವುದೇ ಮಾಹಿತಿ ಪಡೆಯಲು ಅಧಿಕಾರವಿದೆ. ಹಾಗೇನೆ ಅಧ್ಯಕ್ಷರ ವ್ಯಾಪ್ತಿಯಲ್ಲಿ ಬರುವ ರೇಂಜ (ಕ್ಷೇತ್ರ) ನಲ್ಲಿ ಆ ರೇಂಜಿಗೆ ಸಂಬಂಧಿಸಿದ ಎಲ್ಲಾ ನಿಯತಕಾಲಿಕ ಲೆಕ್ಕಪಟ್ಟಿ (ಪೀರಿಯೋಡಿಕ್ ಸ್ಟೇಟ್‌ಮೆಂಟ್ಸ್) ಹಣ ಪಾವತಿಗಳು ರಶೀದಿಗಳನ್ನು ತರಿಸಿ ಆಲೋಚಿಸುವ ಅಧಿಕಾರವಿದೆ.
- ಆ ಪ್ರದೇಶಕ್ಕೆ ಸಂಬಂಧಿಸಿದಂತೆ ಯಾವುದೇ ಸದಸ್ಯರು ಅಲ್ಲಿನ ಆವಶ್ಯಕತೆಗಳನ್ನು ಅಧ್ಯಕ್ಷರ ಗಮನಕ್ಕೆ ತರಬಹುದು ಅಥವಾ ಯಾವುದೇ ಮಹಾನಗರ ಪಾಲಿಕಯೆ ಕೆಲಸ ನಿರ್ವಹಣೆಯಲ್ಲಿ ಅಲಕ್ಷ್ಯ ಅಥವಾ ಕಾರ್ಪೋರೇಶನಿನ ಹಣದ ಆಸ್ತಿಯ ದುರ್ವ್ಯಯೆವನ್ನು ಕೂಡ ಅವರ ಗಮನಕ್ಕೆ ತರಬಹುದು ಮತ್ತು ಯಾವುದೇ ಸದಸ್ಯರು ಯಾವುದೇ ಅಭಿವೃದ್ಧಿ ಬಗ್ಗೆ ತಾವು ಇಚ್ಛಿಸಿದಂತೆ ಸಲಹೆ ಕೊಡಬಹುದು.
- ವಾರ್ಡ್ ಸಮಿತಿಯು ಯಾವುದೇ ನಗರ ಪಾಲಿಕೆಯ ಅಧಿಕಾರಿಯನ್ನು ವಾರ್ಡ್ ಸಮಿತಿ ಸಭೆಗೆ ಹಾಜರಾಗಲು ಕರೆಯಬಹುದು. ಅವರನ್ನು ವ್ಯವಹಾರಕ್ಕೆ ಸಂಬಂಧಿಸಿದಂತೆ ಅವರ ಅಧೀನದಲ್ಲಿರುವ ಸ್ವತ್ತುಗಳ ಮಾಹಿತಿ ಮತ್ತು ಸತ್ಯಾಂಶ ಒದಗಿಸಲು ಅವರನ್ನು ಕರೆಯಬಹುದು. ಅಥವಾ ಸಮಿತಿಯು ಇಚ್ಛಿಸಿದಾಗ ಯಾವುದೇ ದಾಖಲೆ ಅಥವಾ ವರದಿ ಸಲ್ಲಿಸಲು ಕರೆಯಬಹುದು.
- ಇದರಲ್ಲಿ ಗಮನಿಸಬೇಕಾದದ್ದು ಏನೆಂದರೆ ಕೇವಲ ಅಧ್ಯಕ್ಷರಿಗೆ ವಿನ: ಬೇರೆ ಯಾವುದೇ ವಾರ್ಡ್ ಸಮಿತಿ ಸದಸ್ಯರಿಗೆ ಮಾಹಿತಿ ಒದಗಿಸಲು ಕೇಳುವ ಅಧಿಕಾರವಿಲ್ಲ.
- ಮತ್ತೊಂದು ಗಮನಿಸಬೇಕಾದದ್ದು ಏನೆಂದರೆ ಮಹಾನಗರ ಪಾಲಿಕೆಯ ಅಧಿಕಾರಿಗಳು ವಾರ್ಡ್ ಸಮಿತಿಯ ಪದನಿಮಿತ (ಎಕ್ಸ್–ಆಫಿಸಿಯೋ) ಸದಸ್ಯರಾಗಿರುವುದಿಲ್ಲ ಮತ್ತು ಪ್ರತೀ ಸಭೆಗೂ ಅವರು ಹಾಜರಿರಬೇಕಾದ್ದು ಕಡ್ಡಾಯ ಏನೂ ಅಲ್ಲ.

### 1.15 ಬೇರೆ ರಾಜ್ಯಗಳಲ್ಲಿನ ಏರ್ಪಾಡುಗಳು

- ಕೇರಳಾ ಮತ್ತು ಪಶ್ಚಿಮ ಬಂಗಳಾದಲ್ಲಿ ಪ್ರತೀ ವಾರ್ಡಿಗೂ ಒಂದು ವಾರ್ಡ್ ಸಮಿತಿ ಇದೆ.
- ಇದುವರೆಗೂ ವಾರ್ಡ್ ಸಮಿತಿ ಸದಸ್ಯರನ್ನು ನೇರವಾಗಿ ಚುನಾಯಿಸುವುದು ಯಾವ ರಾಜ್ಯದಲ್ಲೂ ಇಲ್ಲ.
- ಪಶ್ಚಿಮ ಬಂಗಾಳದಲ್ಲಿ ಕೌನ್ಸಿಲರುಗಳು 9–11 ವಾರ್ಡ್ಸ್ ಸಮಿತಿ ಸದಸ್ಯರನ್ನೂ ಮತ್ತು ನಗರಪಾಲಿಕೆಗಳು 2–3 ಸದಸ್ಯರನ್ನೂ ನಾಮನಿರ್ದೇಶನ ಮಾಡುವರು.
- ಕೇರಳಾದಲ್ಲಿ ಒಂದು ವಾರ್ಡ್ಸ್ ಸಮಿತಿಯಲ್ಲಿ ಕಡಿಮೆ ಅಂದರೆ 58 ಸದಸ್ಯರಗಳು ಇರುತ್ತಾರೆ: 15 ಸದಸ್ಯರಗಳ ನಾಗರೀಕರ ಸಂಘಗಳಿಂದ, 20 ಸದಸ್ಯರು ನೆರೆಯ ಗುಂಪುಗಳಿಂದ, ಎಲ್ಲಾ ಶಿಕ್ಷಣ ಸಂಸ್ಥೆಗಳ ಮುಖ್ಯಸ್ಥರು 20 ವ್ಯಕ್ತಿಗಳು ನಗರಪಾಲಿಕೆ ಸದಸ್ಯರು ಮತ್ತು ಅಧ್ಯಕ್ಷರು ಒಟ್ಟುಗೂಡಿ ನಾಮನಿರ್ದೇಶನ ಮಾಡುವ 20 ವ್ಯಕ್ತಿಗಳು ಮತ್ತು ನಗರಪಾಲಿಕೆಯಲ್ಲಿ ಪ್ರಾತಿನಿಧ್ಯ ಹೊಂದಿರುವ ಪ್ರತಿಯೊಂದು ರಾಜಕೀಯ ಪಕ್ಷಗಳಿಂದ ನಾಮನಿರ್ದೇಶನವಾಗಿರುವ ತಲಾ ಒಬ್ಬ ಪ್ರತಿನಿಧಿ.

- ಕೇವಲ ಕರ್ನಾಟಕದಲ್ಲಿ ಮಾತ್ರ ಸದಸ್ಯರುಗಳನ್ನು ರಾಜ್ಯ ಸರಕಾರ ನಾಮನಿರ್ದೇಶನ ಮಾಡುತ್ತದೆ.
- ಬೆಂಗಳೂರಿನ ಒಂದು ವಾರ್ಡ್ಸ್ ಸಮಿತಿ ವ್ಯಾಪ್ತಿಯಲ್ಲಿ ಸರಾಸರಿ ಜನಸಂಖ್ಯೆ 1,53,000 ಇದೆ, ಆದರೆ ಇದೇ ಸಂಖ್ಯೆ ಕೊಚ್ಚಿಯಲ್ಲಿ 9,000 ಮತ್ತು ಕೊಲಕೊತ್ತಾದಲ್ಲಿ 33,000 ದಷ್ಟು ಕಡಿಮೆ ಇದೆ.
- ಪಶ್ಚಿಮ ಬಂಗಾಳ ಮತ್ತು ಕೇರಳಾ ಎರಡೂ ಕಡೆಯಲ್ಲಿ ವಾರ್ಡ್ಸ್ ಸಮಿತಿಗಳ ಕರ್ತವ್ಯಗಳು ಕಾರ್ಯಕಾರಿ ಪಟ್ಟಿಯ ತಯಾರಿ, ಆದ್ಯತೆಗಳ ನಿರ್ದಾರ ಅಭಿವೃದ್ಧಿ ಯೋಜನೆಗಳ ಅನುಷ್ಠಾನ, ಮತ್ತು ಫಲಾನುಭವಿಗಳ ಆಯ್ಕೆ ಮಾಡುವುದು, ಇವುಗಳನ್ನು ಒಳಗೊಂಡಿವೆ.
- ಪಶ್ಚಿಮ ಬಂಗಾಳ ಮತ್ತು ಕೇರಳಗಳಲ್ಲಿ ಎಲ್ಲಾ ನಾಗರೀಕರನ್ನೂ ತೊಡಗಿಸಿಕೊಳ್ಳಲು ವಾರ್ಡ್ಸ್ ಸಭೆಗಳನ್ನು ನಡೆಸಲಾಗುತ್ತದೆ.



## 2. ಬೆಂಗಳೂರು ನಗರದಲ್ಲಿ ವಾರ್ಡ್ಸ್ ಸಮಿತಿಯ ಕಾರ್ಯವಿಧಾನ.

### 2.1 ವಾರ್ಡ್ಸ್ ಸಮಿತಿಗಳ ರಚನೆ.

- ವಾರ್ಡ್ಸ್ ಸಮಿತಗಳು ಗ್ರಾಮ ಪಂಚಾಯತ್‌ಗಳಂತೆ ಸಂಪೂರ್ಣವಾಗಿ ಚುನಾಯಿತ ಸಂಸ್ಥೆಗಳಲ್ಲ.
- ಸದಸ್ಯರುಗಳನ್ನು ನಾಮನಿರ್ದೇಶನ ಮಾಡುವ ಪ್ರಕ್ರಿಯೆ ಇಂದಾಗಿ ಚುನಾಯಿತ ಸದಸ್ಯರುಗಳು ಹಾಗೂ ನಾಮನಿರ್ದೇಶನ ಹೊಂದಿರುವ ಸದಸ್ಯರುಗಳು ಪ್ರತಿಸ್ಪರ್ಧಿಗಳಾಗಿದ್ದಾರೆ.
- ವಾರ್ಡ್ಸ್ ಪ್ರದೇಶದ ಎಲ್ಲೆ ಗೊತ್ತುಪಡಿಸುವ ಗೋಸ್ಕರ ನಿರ್ಧರಿಸುವ ನೆಲೆಯು ಜನಸಂಖ್ಯೆಯೂ ಅಲ್ಲ, ಪ್ರದೇಶದ ವ್ಯಾಪ್ತಿಯೂ ಅಲ್ಲವಾಗಿದೆ. ಹಾಗೆ ನೋಡಿದರೆ, ಹಳ್ಳಿಗಾಡಿನ ಪ್ರದೇಶಗಳಲ್ಲಿ ಗ್ರಾಮ ಪಂಚಾಯತ್: ಜನ ಸಂಖ್ಯೆ ಪ್ರಮಾಣವನ್ನು ಸುಮಾರು 1:5000 ಮತ್ತು ಚುನಾಯಿತ ಪ್ರತಿನಿಧಿಗಳು : ಜನಸಂಖ್ಯೆ ಪ್ರಮಾಣ ಸುಮಾರು 1:500 ಸ್ಥಿರಗೊಳಿಸಿದ್ದಾರೆ. ಆದರೆ ಬೆಂಗಳೂರು ನಗರದಲ್ಲಿ ವಾರ್ಡ್ಸ್ ಕಮಿಟಿ : ಜನರ ರೇಶಿಯೋ 1:1 ಲಕ್ಷ ಅಥವ 1.5 ಲಕ್ಷ ಜನಸಂಖ್ಯೆ ಮತ್ತು ಚುನಾಯಿತ ಪ್ರತಿನಿಧಿ : ಮತದಾರರ ಜನಸಂಖ್ಯೆ ಪ್ರಮಾಣ ಸುಮಾರು 1:25,000 ರಿಂದ 30,000 ವರೆಗೆ ಇದೆ.
- ಬೇರೆ ಮಹಾನಗರಪಾಲಿಕೆಗಳಲ್ಲಿ ಒಂದು ವಾರ್ಡ್ಸ್ ಸಮಿತಿ : 20,000 ದಿಂದ 40,000 ವರೆಗೆ ಜನ ಸಂಖ್ಯೆ ಇದೆ. (ಆದರೆ ಕರ್ನಾಟಕ ರಾಜ್ಯದಲ್ಲಿ ಬೆಂಗಳೂರು ಬಿಟ್ಟು ಬೇರೆಲ್ಲೂ ವಾರ್ಡ್ಸ್ ಸಮಿತಿ ರಚನೆಯಾಗಿಲ್ಲ, ಇದು ಬರೆಯುತ್ತಿರು ಸಮಯದಲ್ಲಿ)
- ವಾರ್ಡ್ಸ್ ಸಮಿತಿ : ಒಟ್ಟು ಜನಸಂಖ್ಯೆ ಪ್ರಮಾಣ ಆ ಪ್ರದೇಶದಲ್ಲಿ ಸುಮಾರು 1:1.5 ಲಕ್ಷವಾದಾಗ ನಾಗರಿಕರಿಗೆ ದೊರಕುವ ಸಾಮೀಪ್ಯ ಮತ್ತು ಅಲ್ಲಿ ಹೊಣೆಗಾರಿಕೆ ಎನ್ನುವುದು ದೂರದ ಕನಸೇ ಸರಿ.

### 2.2 ವಾರ್ಡ್ಸ್ ಸಮಿತಿಯ ರಚನೆಗೋಸ್ಕರ ನಡೆಸುವ ಕಾರ್ಯವಿಧಾನಗಳು :

- ನಾಮನಿರ್ದೇಶನಗಳು ಮುಖ್ಯವಾಗಿ ರಾಜ್ಯ ಸರಕಾರದ ಆಡಳಿತ ಪಕ್ಷದ ಮೂಲಕ ಪೂರ್ತಿಯಾಗಿ ಪಕ್ಷದ ಲೇವಾದೇವಿಗೆ ತಕ್ಕಂತೆ ನಡೆಯುತ್ತವೆ. ಯಾವಾಗ ರಾಜ್ಯಮಟ್ಟದ ಚುನಾವಣೆಯಲ್ಲಿ ಪಕ್ಷವು ಅಧಿಕಾರ ಕಳೆದುಕೊಳ್ಳುತ್ತದೊ ಆಗ ಆ ಪಕ್ಷದಿಂದ ಸಂಯೋಜಿಸಿದ ವಾರ್ಡ್ಸ್ ಸಮಿತಿಗಳ ಸದಸ್ಯರು ಮೊದಲಿದ್ದಕ್ಕಿಂತ ಹೆಚ್ಚು ನಿಷ್ಕ್ರಿಯರಾಗುತ್ತಾರೆ.

- ನಾಮನಿರ್ದೇಶನ ಮಾಡುವ ಪ್ರಕ್ರಿಯೆಗಳು ಕೂಡಾ ಪಾರದರ್ಶಿಕವಾಗಿಯೂ ಇರುವುದಿಲ್ಲ ಮತ್ತು ಪ್ರಜಾಪ್ರಭುತ್ವ ರೀತಿಯಲ್ಲೂ ಇರುವುದಿಲ್ಲ.
- ಆಯ್ಕೆ ಮಾಡುವ ಪ್ರಕ್ರಿಯೆಯಲ್ಲಿ ಆ ಪ್ರದೇಶದ ಜನರ ಭಾಗವಹಿಸುವಿಕೆಯು ಇರುವುದಿಲ್ಲ. ಸಾರ್ವಜನಿಕವಾಗಿ ಯಾವ ಅರ್ಜಿಯೂ ಇದಕ್ಕಾಗಿ ಕರೆಯಲಾಗುವುದಿಲ್ಲ ಮತ್ತು ಅರ್ಜಿಗಳ ಸಾರ್ವಜನಿಕ ಸೂಕ್ಷ್ಮ ಪರಿಶೀಲನೆಯೂ ಇರುವುದಿಲ್ಲ ಮತ್ತು ಆಕ್ಷೇಪಣೆಗಳನ್ನು ಸಲ್ಲಿಸುವ ಕ್ರಮವೂ ಇಲ್ಲ ಮತ್ತು ಅಂತಿಮ ಆಯ್ಕೆಯ ರೀತಿಯಲ್ಲೂ ಯಾವುದೇ ಪಾರದರ್ಶಿಕತೆಯೂ ಇರುವುದಿಲ್ಲ.
- ನಾಮನಿರ್ದೇಶನಗಳ ಮೂಲಕ ರಾಜ್ಯ ಸರಕಾರವು ಸ್ಥಳೀಯಾ ಸರಕಾರವನ್ನು ಮೇಲೆ ತನ್ನ ತೆರೆಮರೆಯ ಹಿಡಿತದಲ್ಲಿಡುತ್ತದೆ.
- ಬಹಳಷ್ಟು ನಾಮನಿರ್ದೇಶನ ಹೊಂದಿದ ಸದಸ್ಯರುಗಳು ಮತ್ತು ಸ್ವಯಂಸೇವಾ ಸಂಸ್ಥೆಗಳು ಆಪಾದನೆಯ ಹಿನ್ನೆಲೆ ಹೊಂದಿ ನಗರ ಪಾಲಿಕೆಯ ಕಲಾಪಗಳ ಬಗ್ಗೆ ಯಾವುದೆ ಜ್ಞಾನ ವಿಲ್ಲದವರೂ ಆಗಿದ್ದೂ ಆ ಸ್ಥಾನಕ್ಕೆ ಅನರ್ಹರಾಗಿರುತ್ತಾರೆ.

**2.3 ವಾರ್ಡ್ ಸಮಿತಿ ಕೆಲಸದಲ್ಲಿನ ಸಮಸ್ಯೆಗಳು**

ಅಂತರಿಕ ಕಚ್ಚಾಟ : ಇಲ್ಲಿ ಒಳಗಿನ ಕಾದಾಟ, ಅಂದರೆ ಬೇರೆ ಬೇರೆ ರಾಜಕೀಯ ಪಕ್ಷಗಳಿಂದ ಒಟ್ಟುಗೂಡಿದ ವಾರ್ಡ್ಸ್ ಸಮಿತಿ ಪ್ರತಿನಿಧಿಗಳ ನಡುವೆ ಮತ್ತು ಚುನಾಯಿತರಾದ ಮತ್ತು ನಾಮನಿರ್ದೇಶನ ಹೊಂದಿದ ಸದಸ್ಯರುಗಳ ನಡುವೆಯೂ ನಡೆಯುತ್ತಿರುತ್ತದೆ.

ನಿಯಮಗಳ ಪ್ರತೀಕ್ಷಣೆ ಇಲ್ಲ: ಪ್ರತಿ ತಿಂಗಳಿನಲ್ಲಿ ಸಭೆ ನಡೆಸಬೇಕಾದ ನಿಯಮಗಳನ್ನು ಕಡೆಗಾಣಿಸಲಾಗಿದೆ. ಕೇವಲ ಎರಡು ಯಾ 9 ಮೀಟಿಂಗುಗಳು ಹೆಚ್ಚಿನ ವಾರ್ಡ್ಸ್ ಸಮಿತಿಗಳಲ್ಲಿ 30 ತಿಂಗಳಲ್ಲಿ ನಡೆದಿವೆ.

ಅನುಕೂಲತೆಗಳ ಕೊರತೆ : ಹೆಚ್ಚಿನ ವಾರ್ಡ್ಸ್ ಸಮಿತಿಗಳಲ್ಲಿ ಕೋಣೆಗಳು, ಕಛೇರಿಗೆ ಜಾಗ ಮತ್ತು ಕಾರ್ಯದರ್ಶಿತ್ವದ ನೆರವುಗಳು ಇಲ್ಲದಿರುವುದರಿಂದ ಪರಿಣಾಮಕಾರಿಯಾಗಿ ಕೆಲಸ ಮಾಡಲು ತೊಡಕುಗಳುಂಟಾಗುತ್ತವೆ.

ಸಹಾಯಕ ಕಂದಾಯ ಅಧಿಕಾರಿಗಳ (ಎ.ಆರ್.ಓ) ದುರ್ಬಲ ಪಾತ್ರ: ಸ.ಕಂ.ಅ ಗಳಿಗೆ ಕ್ರಮಬದ್ಧ ಶ್ರೇಣೀಕೃತ ಅಧಿಕಾರವಿಲ್ಲದಿರುವುದರಿಂದ ಆರೋಗ್ಯಕ್ಕೆ ಹಾಗೂ ಕಾಮಗಾರಿಗೆ ಸಂಬಂಧಿಸಿದ ಅಧಿಕಾರಿಗಳಿಗೆ ನಿರ್ದೇಶನ ಕೊಡುವ ಅಧಿಕಾರ ಅವರಿಗಿರುವುದಿಲ್ಲದರಿಂದ ವಾರ್ಡ್ಸ್ ಸಮಿತಿಯ ತೀರ್ಮಾನಗಳನ್ನು ಜಾರಿಗೆ ತರಲು ಸಾಧ್ಯವಾಗುವುದಿಲ್ಲ ಯಾಕೆಂದರೆ ಅವರು ಸ.ಕಂ.ಅ ಗಳ ಸಮಾನ ಶ್ರೇಣಿಯಲ್ಲಿರುವರು. ಸ.ಕಂ.ಅ ಗೆ ಬೆಂಬಲ ಕೊಡುವಂತಹ ಸಹಾಯಕ ಉದ್ಯೋಗಿಗಳು ಅವರ ಕೈ ಕೆಳಗಿಲ್ಲದಿರುವದರಿಂದ ಈ ಎಲ್ಲಾ ನಿರ್ಣಯಗಳೂ ಆಚರಣೆಗೆ ತರಲು ಆಗುವುದಿಲ್ಲ. ಹಾಗಾದ್ದರಿಂದ ಅವರಿಂದ ಕೇವಲ ಮಿನಿಟ್ಸ್ ಜೋಪಾನ ಮಾಡುವುದಷ್ಟೇ ಆಗುತ್ತದೆ. ಅದನ್ನು ಕಾರ್ಯರೂಪಕ್ಕೆ ತರಲಾಗುವುದಿಲ್ಲ.

ಮಾಹಿತಿಯ ಕೊರತೆ: ವಾರ್ಡ್ಸ್ ಸಮಿತಿ ಸದಸ್ಯರುಗಳಿಗೆ ವಾರ್ಡ್ಸ್ ನಕ್ಷೆ ಅಥವಾ ವಾರ್ಡ್ಸ್ ಕಾಮಗಾರಿಗಳ ಬಗ್ಗೆ ರೇಂಜಿನ (ವಿಭಾಗದ) ಖರ್ಚು, ವೆಚ್ಚ, ಆದಾಯಗಳ ಬಗ್ಗೆ, ವಾರ್ಡ್ಸ್‌ನಲ್ಲಿನ ಆಸ್ತಿಗಳ ಬಗ್ಗೆ ಮಾಹಿತಿ ಒದಗಿಸಿಲ್ಲ.



- ನಿಯಮದಂತೆ ಸ.ಕಂ.ಅ ಗಳು ಇಂತಹ ದಾಖಲೆಗಳನ್ನು ಹೊಂದಿದವರಾಗಿರಬೇಕು ಅಂದರೆ ವಾರ್ಡ್ ನಕ್ಷೆ, ಕೌನ್ಸಿಲರುಗಳು ತೆಗೆದುಕೊಂಡ ತೀರ್ಮಾನುಗಳು, ವಾರ್ಡ್‌ನ ಕೆಲಸಗಳು ಮುಂತಾದವುಗಳು. ಆದರೆ ವಾಸ್ತವದಲ್ಲಿ ಸ.ಕಂ.ಅ ಗಳು ಇವುಗಳನ್ನು ಹೊಂದಿರುವುದಿಲ್ಲ ಅಲ್ಲದೇ ವಾರ್ಡ್ ಸಮಿತಿ ಸದಸ್ಯರು ಅದರ ಬೇಡಿಕೆ ಇಟ್ಟಾಗಲೂ ಅದನ್ನು ಪಡೆಯಲು ಪ್ರಯತ್ನಗಳನ್ನೂ ಮಾಡುವುದಿಲ್ಲ.

ಹಣಕಾಸಿನ ಕೊರತೆ : ವಾರ್ಡ್ಸ್ ಸಮಿತಿಗೆ ತೆರ ಮಾಡಿದ 1 ಲಕ್ಷ ರೂಪಾಯಿಗಳು ಕೂಡಾ ಅವರಿಗೆ ಬಿಡುಗಡೆ ಮಾಡಿಲ್ಲ, ಅವರಿಗೆ ವಾರ್ಡಿನ ತುರ್ತು ಕೆಲಸಗಳನ್ನೂ ಸಹಾ ನಿರ್ವಹಿಸಲಾಗುವುದಿಲ್ಲ. ಸಣ್ಣ ಸಣ್ಣ ಕೆಲಸಗಳಿಗೂ ಹಣ ಬಿಡುಗಡೆ ಆಗಲು ಆಯುಕ್ತರಿಗೆ ಮನವಿ ಕಳಿಸಬೇಕಾಗುತ್ತದೆ.

ಅಧಿಕಾರಿಗಳ ಮತ್ತು – ಚುನಾಯಿತ ಪ್ರತಿನಿಧಿಗಳ ನಿರ್ಲಕ್ಷತೆ : ಚುನಾಯಿತರಾದ ಕೌನ್ಸಿಲರುಗಳು, ವಾರ್ಡ್ ಸಮಿತಿಯಲ್ಲಿ ನಾಮನಿರ್ದೇಶನ ಹೊಂದಿದ ಸದಸ್ಯರನ್ನು ಚುನಾವಣಾ ಶುತ್ರುಗಳಾಗಿ ನೋಡಿದ್ದಾರೆ ಮತ್ತು ಯಾವುದೇ ಸಹಕಾರ ನೀಡದೇ ಸತಾಯಿಸುತ್ತಾರೆ. ಅಧಿಕಾರಿಗಳು ವಾರ್ಡ್ ಸಮಿತಿಯಲ್ಲಿ ನಾಮನಿರ್ದೇಶನವಾದ ಸದಸ್ಯರುಗಳನ್ನು ಕಡೆಗಣಿಸುತ್ತಾರೆ ಯಾಕೆಂದರೆ ವಾರ್ಡ್ ಸಮಿತಿ ಸದಸ್ಯರುಗಳಿಗೆ ಅವರ ವರ್ಗಾವಣೆ ಮಾಡಲು ಅಧಿಕಾರವಿರುವುದಿಲ್ಲ.

- ಯೋಜನೆಯಲ್ಲಿ, ಮೇಲ್ವಿಚಾರಿಸುವುದರಲ್ಲಿ ಅಥವಾ ಮೌಲ್ಯಮಾಪನ ಕೆಲಸದಲ್ಲಿ ಯಾವುದೇ ಪಾತ್ರವಿಲ್ಲದಿರುವುದು. ವಾರ್ಡ್ ಸಮಿತಿ ಸದಸ್ಯರುಗಳಿಗೆ ವಾರ್ಡಿನ ಯೋಜನೆಯಲ್ಲಾಗಲೀ, ಮೇಲ್ವಿಚಾರಣೆಯಲ್ಲಾಗಲೀ, ಮೌಲ್ಯಮಾಪನ ಕೆಲಸದಲ್ಲಾಗಲ್ಲಿ ಯಾವ ಪಾತ್ರವೂ ಇಲ್ಲ. ಅವರು ನಾಗರಿಕರ ಸಂಕಷ್ಟಗಳನ್ನು ತಿಳಿಸಲು ಮಾತ್ರ ಇರುವ ವಾಹಕರಾಗಿದ್ದಾರೆ.
- ವಾರ್ಡ್‌ಗಳ ಹಣಕಾಸುಗಳ ಬಗ್ಗೆ ಸೂಕ್ಷ್ಮ ನೋಟದ ಕೊರತೆ : ವಾರ್ಡ್ ಸಮಿತಿಗಳಿಗೆ ವಾರ್ಡ್‌ಗೋಸ್ಕರ ಆಯವ್ಯಯ, ಪತ್ರ ಸಿದ್ಧತೆ ಮಾಡುವುದು, ಕೆಲಸಗಳ ಆದ್ಯತೆ ಬಗ್ಗೆ ನಿಶ್ಚಯಿಸುವುದು, ಅವರ ಯೋಜನೆಗೆ ಅವರ ಯೋಜನೆಗೆ ಹಣಕಾಸಿಗಾಗಿ, ಮಹಾನಗರ ಪಾಲಿಕೆಯ ಜತೆ ಲಾಬಿ ಮಾಡುವುದು, ಈ ಯಾವುದರಲ್ಲೂ ಅವರಿಗೆ ಪಾತ್ರವಿರುವುದಿಲ್ಲ. ಅಲ್ಲದೇ ವಾರ್ಡ್ ಕೆಲಸಕ್ಕೋಸ್ಕರ ಮಂಜೂರಾದ ಹಣ ಉಪಯೋಗಿಸುವುದರಲ್ಲೂ ಅವರದು ನಿಷ್ಕ್ರಿಯ ಪಾತ್ರ. ತಮ್ಮ ಕ್ಷೇತ್ರದಲ್ಲಿ (ರೇಂಜ್) ಆದಾಯ ಹಾಗೂ ವೆಚ್ಚದ ಕುರಿತು ವಾರ್ಡ್ ಸಮಿತಿ ಸದಸ್ಯರುಗಳಿಗೆ ಯಾವುದೇ ಒಳ ನೋಟವಿರುವುದಿಲ್ಲ. ತಮ್ಮ ಕ್ಷೇತ್ರದಲ್ಲಿ ನಿರ್ವಹಿಸುವ ಕೆಲಸಗಳಿಗೆ ಆದ ವೆಚ್ಚಗಳು, ಹಾಗೂ ಹಣ ಪಾವತಿಗಾಗಿ ತಯಾರಿಸಿದ ಬಿಲ್ ಗಳನ್ನು ಮಂಜೂರು ಮಾಡಿಸುವುದು, ಇದರ ಬಗ್ಗೆ ಒಳನೋಟ ಇಲ್ಲ.
- ವ್ಯವಸ್ಥಿತ ಬದಲಾವಣೆ ತರುವಲ್ಲಿ ಅಸಮರ್ಥತೆ :
- ವಾರ್ಡ್ ಸಮಿತಿಗಳು ವಾರ್ಡಿನ ಸಂಪನ್ಮೂಲಗಳ ಮೇಲಿನ ನಿಯಂತ್ರಣವಿಲ್ಲದೇ, ವಾರ್ಡ್‌ನ ಬಗ್ಗೆ ನಿರ್ಣಯಗಳನ್ನು ತೆಗೆದುಕೊಳ್ಳುವುದು ಅವರ ಹತೋಟಿಯಲ್ಲಿ ಇಲ್ಲದೆ, ವ್ಯವಸ್ಥೆಯಲ್ಲಿ ಬದಲಾವಣೆ ತರಲು ಅಸಮರ್ಥವಾಗಿವೆ. ವಾರ್ಡ್ ಸಮಿತಿ ಸದಸ್ಯರಿಗೆ ಕೆಲಸದ ನಿರ್ವಹಣೆಯ ಪ್ರಕ್ರಿಯೆಯನ್ನು ಪ್ರಭಾವಿಸಲು ಸಾಧ್ಯವಾಗಿಲ್ಲ

ಹಾಗೂ ವ್ಯವಸ್ಥೆಯ ಲೋಪದೋಶಗಳಿಗೆ ಸಮರ್ಪಕ ಉತ್ತರ ಅಥವ ಸುವ್ಯವಸ್ಥೆ ಒದಗಿಸಿಲಾಗಿಲ್ಲ.

- ಕೆಟ್ಟ ಪಟ್ಟ ಭದ್ರ ಹಿತಾಸಕ್ತಿಗಳ ಜೋಡಣೆ ಮುರಿಯಲಾಗದೇ ಅಸಮರ್ಥತೆ. ವಾರ್ಡ್ ಸಮಿತಿಗಳು ಪ್ರತೀ ವಾರ್ಡ್‌ನಲ್ಲೂ ಮನೆ ಮಾಡಿಕೊಂಡಿದ್ದ ಕೆಟ್ಟ ಸಂಬಂಧಗಳ ಜೋಡಣೆ, ಪಟ್ಟಭದ್ರ ಹಿತಾಸಕ್ತಿ ಅಂದರೆ ಗುತ್ತಿಗೆದಾರರು, ಅಧಿಕಾರಿಗಳು, ಹಾಗೂ ಚುನಾಯಿತ ಪ್ರತಿನಿಧಿಗಳ ನಡುವಿನ ಭಷ್ಟಚಾರ ಮತ್ತು "ಶೇಕಡಾ" ಅಥವಾ "ಕಟ್" ಪಡೆಯುವ, ಇಂತಹ ಒಳಗೇ ಕೊರೆಯುವ ಜೋಡಣೆ ಮುರಿಯಲಾಗದೆ ಅಸಮರ್ಥವಾಗಿವೆ.
- ಜನತೆಯ ಭಾಗವಹಿಸುವಿಕೆಯ ಕೊರತೆ:

  ಫಲಾನುಭವಿಗಳನ್ನು ಗುರುತಿಸಲು ಅಥವ ವಾರ್ಡ್‌ನ ಅಭಿವೃದ್ಧಿ ಯೋಜನೆಯನ್ನು ರೂಪಿಸಲು, ಒಂದು "ತಳದಿಂದ ಮೇಲೆ" ಹೋಗುವ ಪ್ರಕ್ರಿಯೆಯನ್ನು ನಿರೂಪಿಸಲು, ವಾರ್ಡ್ ಸಮಿತಿಗಳು ಆಗಾಗ್ಗೆ ಜನತೆಯ ಜತೆ ಮುಖಾಮುಖಿ ಭೇಟಿ ಮಾಡಲು ಒಂದು ವ್ಯವಸ್ಥಿತ ಹಾಗೂ ಸಾಂಸ್ಥಿಕ ಕ್ರಮ ಇರಲಿಲ್ಲ.

  ವಾರ್ಡಿನ ಕಾಮಗಾರಿಯ ಉಸ್ತುವಾರಿಯಲ್ಲಾಗಲಿ ಅಥವಾ ವಾರ್ಡಿನ ಖರ್ಚು ವೆಚ್ಚಗಳ ಸಾಮಾಜಿಕ ಲೆಕ್ಕ ಶೋಧನೆ ಮಾಡುವಲ್ಲಾಗಲಿ, ವಾರ್ಡಿನ ಜನತೆಯ ಭಾಗವಹಿಸುವಿಕೆಯನ್ನು ಪಡೆಯಲು ಸೂಕ್ತವಾದ ಕ್ರಮಗಳಿರಲಿಲ್ಲ.

### 2.4 ವಾರ್ಡ್ ಸಮಿತಿಗಳ ದಕ್ಷತೆ

- ಕೆಲವೇ ಸಭೆಗಳು ನಡೆದಿರುವುದರಿಂದ ಒಟ್ಟಿನಲ್ಲಿ ವಾರ್ಡ್ ಸಮಿತಿ ನಿರ್ವಹಣೆಯು ನೇತ್ಯಾತ್ಮಕ ವೆಂದೇ ಪರಿಗಣಿಸಲಾಯಿತು.
- ರಾಜಕೀಯ ಹಸ್ತಕ್ಷೇಪ ಮತ್ತು ಅಧಿಕಾರಿಗಳ ನಿರ್ಲಕ್ಷ, ಇವೇ ವಾರ್ಡ್ ಸಮಿತಿಗಳು ಪರಿಣಾಮಕಾರಿಯಾಗಿ ಕೆಲಸ ಮಾಡಲು ತಡೆಯಾಗಿದೆ ಎಂದು ಪರಿಗಣಿಸಲಾಯಿತು.
- ವಾರ್ಡ್ ಸಮಿತಿಗಳು ದೊಡ್ಡ ರೀತಿಯ ವಿಕೇಂದ್ರೀಕರಣ ಹಾಗೂ ಹೊಣೆಗಾರಿಕೆ ತಂದಿಲ್ಲ.
- ವಾರ್ಡ್ ಸಮಿತಿಯು ನಗರದ ಸ್ಥಳೀಯ ಆಡಳಿತದಲ್ಲಿ ಜನರ ಪಾಲ್ಗೊಳ್ಳುವಿಕೆಯ ವಿದ್ಯುಕ್ತ ಮಾಧ್ಯಮ ಆಗಿಲ್ಲ.
- ವಾರ್ಡ್ ಸಮಿತಿಗಳಿಗೆ ಯಾವುದೇ ಅಧಿಕಾರ, ಹಣಕಾಸು ಅಥವ ನಿರ್ಣಯ ತೆಗೆದುಕೊಳ್ಳುವ ಪಾತ್ರವೂ ಇಲ್ಲದ ಕಾರಣ, ಅವರಿಗೆ ವಾರ್ಡಿನಲ್ಲಿ ವಿವಿಧ ಹಿತಾಸಕ್ತಿಗಳ ಮಧ್ಯೆ ಉಂಟಾಗಬಹುದಾದ ಸಂಘರ್ಷಣೆಗಳ ಅಥವ ಸ್ಪರ್ಧೆಗಳನ್ನು ಬಿಡಿಸುವ ಹಾಗೂ ಹಣಕಾಸಿನ ಅಭಾವ ಇರುವಾಗ ಯಾವ ಕೆಲಸಗಳಿಗೆ ಆದ್ಯತೆ ಕೊಡಬೇಕೆನುವದಕ್ಕೆ ಒಂದು ಮಾದರಿಯನ್ನು ಅಳವಡಿಸಿಕೊಳ್ಳುವ; ಅಥವ ವಾರ್ಡಿನ ಸಂಪನ್ಮೂಲಗಳ ನ್ಯಾಯಯುತ ವಿಂಗಡನೆ ಮಾಡುವ, ಸಂದರ್ಭ ಒದಗಲೇ ಇಲ್ಲ.
- ಒಟ್ಟಿನಲ್ಲಿ, ವಾರ್ಡ್ ಸಮಿತಿಗಳು ನಿಜವಾದ ಸ್ಥಳೀಯ ಸ್ವಆಡಳಿತದ ಸಂಸ್ಥೆಗಳಾಗಲೇ ಇಲ್ಲ.




## ಸಿವಿಕ್ ನ ಶಿಫಾರಸ್ಸುಗಳು

### 3.1 ವಾರ್ಡ್ ಸಮಿತಿ ರಚನೆ

- ಸ್ಥಳೀಯ ಆಡಳಿತದ ಪ್ರಾತನಿಧ್ಯತ್ವ ಹಾಗೂ ಜನತೆಗೆ ಸಾಮೀಪ್ಯ ಹೆಚ್ಚಿಸಲು, ಹಾಗೂ ಜನಸಂಖ್ಯೆ ಮತ್ತು ವಾರ್ಡ್ ಸಮಿತಿಗಳಿಗಿರುವ ಪ್ರಮಾಣ ಹೆಚ್ಚಿಸಲು, ಪ್ರತಿ ವಾರ್ಡಿಗೂ ಒಂದು ವಾರ್ಡ್ ಸಮಿತಿ ಇರಬೇಕು. ಒಂದು ವಾರ್ಡ್ ಸಮಿತಿಯಲ್ಲಿ ಒಬ್ಬ ಮಾತ್ರ ಚುನಾಯಿತ ಕೌನ್ಸಿಲ್ಲರ್ ಇದ್ದರೆ, ಬೇರೆ ಬೇರೆ ವಾರ್ಡ್‌ಗಳ ಹಾಗೂ ರಾಜಕೀಯ ಪಕ್ಷಗಳ ಕೌನ್ಸಿಲರ್ ಗಳ ನಡುವೆ ಕಾದಾಟವನ್ನು ತಪ್ಪಿಸಬಹುದು.
- ವಾರ್ಡ್ ಸಮಿತಿಯ ಪ್ರಾತಿನಿಧ್ಯಗುಣ ಹೆಚ್ಚಿಸಲು, ವಾರ್ಡ್ ಸಮಿತಿ ಸದಸ್ಯರನ್ನು ವಾರ್ಡಿನ ಉಪ ವಿಭಾಗಗಳಿಂದ ನೇರವಾಗಿ ಚುನಾಯಿಸಬೇಕು, ಗ್ರಾಮ ಪಂಚಾಯಿತಿಗಳಲ್ಲಿ ಪ್ರತಿಯೊಬ್ಬ ಸದಸ್ಯರು ಚುನಾಯಿತ ಪ್ರತಿನಿಧಿ ಆಗಿರುವ ರೀತಿಯಲ್ಲಿ. ಇದರಿಂದ ಚುನಾಯಿತ ಸದಸ್ಯರು ಹಾಗೂ ನಾಮನಿರ್ದೇಶನ ಹೊಂದಿದ ಸದಸ್ಯರ ನಡುವೆ ಕಾದಾಟವನ್ನು ತಪ್ಪಿಸಬಹುದು.
- ಕೊನೇ ಪಕ್ಷ ಪ್ರತೀ 5,000 ಜನ ಸಂಖ್ಯೆಗೆ ಒಬ್ಬ ಚುನಾಯಿತ ಪ್ರತಿನಿಧಿ ಇರಬೇಕು.
- ಕೊನೇ ಪಕ್ಷ ಪ್ರತೀ 50,000 ಜನ ಸಂಖ್ಯೆಗೆ ಒಂದು ವಾರ್ಡ್ ಸಮಿತಿ ಇರಬೇಕು.
- ಶೇಕಡ 50 ಮೀಸಲಾತಿ ಮಹಿಳೆಯರಿಗೆ ವಾರ್ಡ್ ಸಮಿತಿಗಳಲ್ಲಿ ಇರಬೇಕು.
- ವಾರ್ಡ್ ಸಮಿತಿ ಸದಸ್ಯರಲ್ಲಿ ಒಬ್ಬರನ್ನು, (ಗ್ರಾಮ ಪಂಚಾಯಿತಿ ಅಧ್ಯಕ್ಷರ ಚುನಾವಣೆ ಮಾದರಿ) ನೇರವಲ್ಲದ ಚುನಾವಣೆಯಲ್ಲಿ ವಾರ್ಡ್ ಕೌನ್ಸಿಲರನ್ನಾಗಿ ಚುನಾಯಿಸುವುದನ್ನು ಆಲೋಚಿಸುವ ಅಗತ್ಯವಿದೆ.
- ಈಗಿನ ಅಭ್ಯಾಸದಂತೆ ವಾರ್ಡ್ ಸಮಿತಿಯ ಕಾರ್ಯದರ್ಶಿಯಾಗಿ ಸಹಾಯಕ ಕಂದಾಯ ಅಧಿಕಾರಿಯನ್ನು ಮಾಡುವ ಬದಲು, ಅವರ ಜಾಗದಲ್ಲಿ ವಾರ್ಡ್ ಸಮಿತಿಯ ಸಿ.ಇ.ಓ. (ಮುಖ್ಯ ಕಾರ್ಯಪಾಲಕ ಅಧಿಕಾರಿ) ಇರಬೇಕು.
- ನಗರಪಾಲಿಕೆಯ ಅಧಿಕಾರಿಗಳು (ಆರೋಗ್ಯ, ಕಾಮಗಾರಿ, ಇತ್ಯಾದಿ) ವಾರ್ಡ್ ಸಮಿತಿಯ ಅಧಿಕಾರ ಪ್ರಯುಕ್ತ (ಎಕ್ಸ್ – ಆಫಿಸ್) ಸದಸ್ಯರಾಗಬೇಕು.
- ವಾರ್ಡ್ ಸಮಿತಿಯ ಕ್ಷೇತ್ರದಿಂದ ವಿವಿಧ ರೀತಿಯ ಪಾಲುದಾರರನ್ನು (ಣಚಿಞಜ ಔಠಟಜಜಡಿ) ನಾಮ ನಿರ್ದೇಶನ ಮಾಡುವ ಸಾಧ್ಯತೆ ಇರಬೇಕು. ಇದಕ್ಕಾಗಿಯೇ ಒಂದು ವಿಶೇಷ ಸಮಿತಿಯನ್ನು ಸ್ಥಾಪಿಸಬಹುದು.
- ಜನರ ಸಹಭಾಗಿತ್ವದೊಂದಿಗೆ ವಾರ್ಡ್ ಸಮಿತಿಯ ಉಪ ಸಮಿತಿಗಳನ್ನು ಬೇರೆ ಬೇರೆ ವಿಷಯಗಳಿಗೆ ಸಂಬಂಧಿಸಿದಂತೆ, ಅಂದರೆ ತ್ಯಾಜ್ಯ ವಸ್ತುಗಳ ವಿಲೇವಾರಿ, ಕೊಳಚೆ ಪ್ರದೇಶದ ಸುಧಾರಣೆ, ಇತ್ಯಾದಿಗಳಿಗೆ, ರಚಿಸಬಹುದು.


### 3.2 ವಾರ್ಡ್‌ಸಮಿತಿಗಳಸಭೆಗಳು




- ತಿಂಗಳಿನಲ್ಲಿ ಸಭೆಗೆ ಒಂದು ನಿಶ್ಚಿತ ದಿನವನ್ನು ಮೀಸಲಿಡಬೇಕು.
- ಸಭೆ ಬಗ್ಗೆ ಮಾಧ್ಯಮಗಳ ಮೂಲಕ ಪ್ರಕಟಣೆ ಆಗಬೇಕು.
- ಸಭೆಗಳು ವಾರ್ಡಿನ ಯಾವುದಾದರೂ ಸಾರ್ವಜನಿಕ ಸಭಾಂಗಣದಲ್ಲಿ ನಡೆಯಬೇಕು.
- ಸಭೆಗಳಿಗೆ ಒಂದು ಸ್ಥಾಯಿ ಕಾರ್ಯಸೂಚಿ ಪಟ್ಟಿ ಇರಬೇಕು, ಇದರಲ್ಲಿ ಶಿಕ್ಷಣ, ಕೊಳಚೆ ಪ್ರದೇಶಗಳ ಸುಧಾರಣೆ, ಇಂತಹ ಅಭಿವೃದ್ಧಿ ವಿಷಯಗಳು ಸೇರಿರಬೇಕು.
- ಅಧ್ಯಕ್ಷರು, ಸದಸ್ಯರುಗಳು, ಮತ್ತು ಅಧಿಕಾರಿಗಳ ಜವಾಬ್ದಾರಿಗಳು ಯಾವುದೇ ಸಂದಿಗ್ದತೆ ಇಲ್ಲದೇ, ಸ್ಪಷ್ಟವಾಗಿ ನಿಗದಿತವಾಗಿರುವ ಕಾರ್ಯವಿಧಾನಗಳ ಮೂಲಕ ನಿಶ್ಚಿತವಾಗಿರಬೇಕು.
- ವಾರ್ಡ್ ಸಮಿತಿ ಸಭೆಯಲ್ಲಿ ಎತ್ತಲಾದ ಸಮಸ್ಯೆಗಳ ಕಾರ್ಯ ನಿರ್ವಹಣೆಯ ವರದಿ (ಆಕ್ಷನ್ ಟೇಕನ್ ರಿಪೋರ್ಟ್) ಯನ್ನು ನಿಗದಿತ ಸಮಯ ದೊಳಗೆ ಒದಗಿಸಬೇಕು.
- ಎತ್ತಲಾದ ಸಮಸ್ಯೆಗಳ ಬಗ್ಗೆ ಅಲಕ್ಷಿಸಿದ ಅಧಿಕಾರಿಗಳಿಗೆ ದಂಡ ವಿಧಿಸಬೇಕು.
- ವಾರ್ಡ್ ಸಮಿತಿಗಳ ನಿರ್ಧಾರಗಳನ್ನು ವಾರ್ಡ್‌ಗಳ ಮಾಹಿತಿ ಸೂಚಿಸುವ ಫಲಕಗಳ ಮೇಲೆ ಪದರ್ಶಿಸಬೇಕು.



### 3.3 ವಾರ್ಡ್ ಸಮಿತಿಗಳ ಕಾರ್ಯವಿಧಾನಗಳು:





Ward Committee members protect public property

- ವಾರ್ಡ್ ಸಮಿತಿ ಕಾರ್ಯ ಮೇಲೆ ಅವರಿಗೆ ಪ್ರತ್ಯೇಕ ನಿಯೋಜಿತ ಅಧಿಕಾರವಿರಬೇಕು.
- ಎಂ.ಎಲ್.ಎ. ಗಳಿಗಾಗಲೀ ಎಂ.ಪಿ ಗಳಿಗಾಗಲೀ ಈ ವಿಷಯಗಳ ಮೇಲೆ ಸಮನಾದ ಅಧಿಕಾರ ನೀಡಬಾರದು.
- ವಾರ್ಡ್ ಸಮಿತಿಗೆ ಅವರಿಗೆ ವಹಿಸಲಾದ ಕಾರ್ಯಗಳನ್ನು ನಿರ್ವಹಿಸಲು ಬೇಕಾದ ಅಧಿಕಾರ, ಹಣಕಾಸು ಮತ್ತು ಅಧಿಕಾರಿಗಳನ್ನು ವರ್ಗಾವಣೆ ಮಾಡಬೇಕು.
- ತಕ್ಕದಾದ ಕಛೇರಿ, ಸಭೆ ನಡೆಸಲು ಸ್ಥಳ ಮತ್ತು ಕಾರ್ಯಾಲಯದ ಬೆಂಬಲವನ್ನು ಒದಗಿಸಬೇಕು.
- ಯೋಜನೆ ಹಾಕುವುದು, ಆದ್ಯತೆಗಳನ್ನು ಗುರುತಿಸುವುದು, ಜಾರಿಗೊಳಿಸುವುದು, ಮೇಲ್ವಿಚಾರಣೆ ಮಾಡುವುದು ಮತ್ತು ಲೆಕ್ಕಸಂಶೋಧನೆ ಮಾಡುವುದು ಮುಂತಾದವುಗಳನ್ನು ವಾರ್ಡ್ ಸಮಿತಿಯಿಂದ, ನಾಗರಿಕರನ್ನು ತೊಡಿಗಿಸಿಕೊಂಡು, ತಳದಿಂದ ಮೇಲೆ ಹರಿಯುವ ಪ್ರಕ್ರಿಯೆಯಲ್ಲಿ ಮಾಡಬೆಕು.
- ವಾರ್ಡ್ ಸಮಿತಿನಿರ್ವಹಣೆ ಹಾಗೂ ವಿವಿಧ ಸದಸ್ಯರಗುಳ ಪಾತ್ರಗಳ ಕುರಿತು ಸ್ಪಷ್ಟತೆ ಇರಬೇಕು.
- ಸದಸ್ಯರುಗಳು ಸಾರ್ವಜನಿಕರ ಮಾಹಿತಿಯ ಹಕ್ಕು ಗೌರವಿಸಬೇಕು ಮತ್ತು ಕೆಲವು ಮಾಹಿತಿಗಳನ್ನು ವಾರ್ಡ್‌ನ ಕಾಮಗಾರಿಗಳ ಬಗ್ಗೆ ಇತ್ಯಾದಿ ಸೂ. ಮೊಟೊ ಒದಗಿಸುವುದು.
- ವಾರ್ಡ್ ಸಮಿತಿಗಳಿಗೆ ಸ್ಥಳೀಯ ಸಂಪನ್ಮೂಲಗಳ ಮೇಲೆ ಮತ್ತು ಅವುಗಳಿಗೆ ಸಂಬಂಧಿಸಿದ ನಿರ್ಣಯಗಳ ಮೇಲೆ, ಉದಾಹರಣೆಗೆ ನಾಗರಿಕ ಜೀವನ

ಸೌಕಾರ್ಯಕ್ಕಾಗಿ (ಸಿ.ಎ) ಮೀಸಲಿಟ್ಟಿರುವ. ಜಮೀನಿನ ಬಳಕೆ ಬಗ್ಗೆ, ಈ ಎಲ್ಲ ವಿಚಾರಗಳ ಮೇಲೆ ಸಂಪೂರ್ಣ ಹತೋಟಿ ಒದಗಿಸಬೇಕು.

- ಆಯಾ ಪ್ರದೇಶದಲ್ಲಿನ ದೊಡ್ಡ ಯೋಜನೆಗಳಿಗೆ ವಾರ್ಡ್ ಸಮಿತಿಯ ಒಪ್ಪಿಗೆ ಪಡೆಯುವುದು.

**3.4 ವಾರ್ಡ್ ಸಮಿತಿ – ನಾಗರಿಕರ ಪರಸ್ಪರ ಸ್ಪಂದನ :**



- ಕೊನೆಯ ಪಕ್ಷ ಒಂದು ವರ್ಷದಲ್ಲಿ 4 ವಾರ್ಡ್ ಸಭೆಗಳು, ಗ್ರಾಮ ಸಭೆಗಳ ರೀತಿಯಲ್ಲಿ, (ಪ್ರತಿ 5,000 – 10,000 ಜನಸಂಖ್ಯೆಗೆ) ನಡೆಯಬೇಕು.
- ವಾರ್ಡ್ ಸಭೆಯು (ಶಾಸನ ಸಭೆ) ಪಾರ್ಲಿಮೆಂಟಿನಂತೆ ಮತ್ತು ವಾರ್ಡ್ ಸಮಿತಿಯು ಮಂತ್ರಿ ಮಂಡಲದಂತೆ (ಕೆಬಿನೆಟ್) ಇರಬೇಕು.
- ವಾರ್ಡ್ ಸಭೆಗಳು ಯೋಜನೆ, ಮೇಲ್ವಿಚಾರಣೆ ಮತ್ತು ಸಾಮಾಜಿಕ ಲೆಕ್ಕಶೋಧನೆಗೆ ವೇದಿಕೆ ಆಗಿರಬೇಕು.
- ವಾರ್ಡ್ ಆದ್ಯತೆಗಳನ್ನು ಗುರುತಿಸುವಲ್ಲಿ ಹಾಗೂ ಯೋಜನೆಗಳಿಗೆ ಅಂತಿಮ ರೂಪ ಕೊಡುವಲ್ಲಿ, ವಾರ್ಡಿನ ಎಲ್ಲಾ ಹಿತಾಸಕ್ತ ಗುಂಪುಗಳಿಗೆ ಮತ್ತು ವರ್ಗಗಳಿಗೆ ಧ್ವನಿಕೊಡುವ ಅವಕಾಶ ನೀಡಲು ಸಹಭಾಗಿತ್ವ ಉಳ್ಳ ರೀತಿ ರಿವಾಜುಗಳು (ಕಡಿಿಥಿಜಜಣಡಿಿಫ ಠಜಿ) ಅರಳಬೇಕು, ಹಾಗೂ ಸ್ವರ್ಧಾತ್ಮಕ ಹಿತಾಸಕ್ತಿಗಳ ಮಧ್ಯೆ ಒಮ್ಮತ ತರಲು ಒಂದು ಪ್ರಜಾಸತ್ತಾತ್ಮಕ ಪ್ರಕ್ರಿಯೆ ಜಾರಿಗೆ ಬರಬೇಕು.
- ತಲಾ ಒಂದು ರಸ್ತೆಗೆ ಒಂದು ನಾಗರಿಕರ ಸಂಘ, ಹಾಗೂ ಸಮುದಾಯದ ಅಥವಾ ವಾರ್ಡಿನ ಮಟ್ಟದಲ್ಲಿ ಇವುಗಳ ಒಕ್ಕೂಟಗಳ ಸೃಷ್ಟಿಗೆ ತೆರೆವು ಮಾಡಿಕೊಡಬೇಕು.




# ವ್ಯಾಪಕ ಬದಲಾವಣೆಗಳು

**4.1 ವ್ಯಾಪಕ ಬದಲಾವಣೆಗಳು**

ನಗರ ಸ್ಥಳೀಯ ಸರ್ಕಾರಗಳು ಸ್ವಯಂ ಆಡಳಿತದ ಸಾಚಾ ಸಂಸ್ಥೆಗಳಾಗಬೇಕಾದರೆ ಈ ಕೆಳಗಿನವುಗಳನ್ನು ಆಚರಣೆಗೆ ತರಬೇಕು.

- ನಗರಪಾಲಿಕೆಗಳು ಅಭಿವೃದ್ಧಿಯ ನಿಯೋಗಿಗಳಾಗಬೇಕು ಮತ್ತು ಕೇವಲ ಸೇವೆಗಳನ್ನು ಒದಗಿಸುವ ಸಂಸ್ಥೆಗಳಾಗಬಾರದು.
- 12ನೇ ಅಧಿಸೂಚನೆಯಲ್ಲಿ ಪಟ್ಟಿಯಾಗಿರುವ ಕಾರ್ಯಕ್ರಮಗಳು“ಆರ್ಥಿಕ ಮತ್ತು ಸಾಮಾಜಿಕ ಬೆಳವಣಿಗೆಯ ಕಾರ್ಯಕ್ರಮಗಳು” ಮತ್ತು “ದುರ್ಬಲವರ್ಗಗಳ ಹಿತಾಸಕ್ತಿ ಕಾಪಾಡುವುದು” ನಗರಪಾಲಿಕೆಗಳ ಕರ್ತವ್ಯಗಳು ಆಗಬೇಕು.
- ಆಹಾರ ಭದ್ರತೆ (ಪಿ.ಡಿ.ಎಸ್) ಉದ್ಯೋಗ (ಇ.ಜಿ.ಎಸ್) ವಸತಿ, ಪ್ರಾಥಮಿಕ ಆರೋಗ್ಯ ರಕ್ಷಣೆ, ಪ್ರಾಥಮಿಕ ಶಿಕ್ಷಣ ಮತ್ತು ಸಾಮಾಜಿಕ ಭದ್ರತೆಗಳ ಯೋಜನೆಗಳು 12ನೇ ಶೆಡ್ಯುಲನಲ್ಲಿ ತರುವುದು ಮತ್ತು ಅನ್ವಯ ಕ್ರಮವಾಗಿ ಕೆಳಗಿನ ಹಂತವಾದ ವಾರ್ಡ್ ಸಮಿತಿಗೆ ಹರಿದು ವಿಕೇಂದ್ರೀಕರಣವಾಗಬೇಕು.





Ward Committee members monitor the local ration shop

- 12ನೇ ಅಧಿಸೂಚನೆಯಲ್ಲಿರುವ ವಿಷಯಗಳಿಗೆ ತಗಲುವ ವೆಚ್ಚ ಹಾಗೂ ಈ ವಿಷಯಗಳ ಬಗ್ಗೆ ಕ್ರಮ ಜರಗಿಸುವ ರಾಜ್ಯ ಸರ್ಕಾರದ ಲೈನ್ ಇಲಾಖೆಗಳ

ಅಧಿಕಾರಿಗಳು (Functionarie), ಉದಾಹರಣೆಗೆ ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಆರೋಗ್ಯ ಮತ್ತು ಶಿಕ್ಷಣ ಇಲಾಖೆಗಳು ಇತ್ಯಾದಿ, ಮತ್ತು ಅರೇ ಸರ್ಕಾರಿ (Parastatal) ಮಂಡಳಿಗಳ ಅಧಿಕಾರಿಗಳು ಉದಾಹರಣೆಗೆ, ನೀರು ಸರಬರಾಜು ಮಂಡಳಿ, ನಗರ ಯೋಜನಾ ಪ್ರಾಧಿಕಾರ, ಇತ್ಯಾದಿಗಳು ನಗರಪಾಲಿಕೆಗೆ ವರ್ಗಾವಣೆಗೊಂಡು ಮತ್ತು ಅದಕ್ಕೂ ಕೆಳಗೆ ವಾರ್ಡ್ ಸಮಿತಿಗೂ ಬರುವಂತಾಗಬೇಕು.

**4.2 74ನೇ ತಿದ್ದುಪಡಿ ಹೆಚ್ಚು ಪರಿಣಾಮಕಾರಿಯಾಗಿ ಜಾರಿ ಆಗಲು ನೀವೇನು ಮಾಡಬೇಕು.**

ನಗರಪಾಲಿಕೆಯ ಚುನಾಯಿತ ಸದಸ್ಯರುಗಳು ತಾವು ತಮ್ಮ ವಾರ್ಡಿನಲ್ಲಿ ನಿರ್ಣಯ ತೆಗೆದುಕೊಳ್ಳುವ ಹಕ್ಕುದಾರರು ಎಂದು ಭಾವಿಸುವುದು ಸಹಜವಾದದ್ದೇ ಯಾಕೆಂದರೆ ಅವರು ಜನತೆಯ ಜನಾದರಣೆಯ ತೀರ್ಪಿನಿಂದ ಆಯ್ಕೆಯಾದವರು. ಏನೆಂದರೂ,




ಇವರು ನಾಗರಿಕರ ಹಿತಾಸಕ್ತಿಗಳನ್ನು ಪ್ರತಿನಿಧಿಸಲು ಆಯ್ಕೆಯಾದವರೇ ವಿನ: ಯಾವುದು ಮಾಡಬೇಕು ಎಂದು ತಮ್ಮದೇ ಯೋಚನೆಗಳನ್ನು ಜಾರಿಗೊಳಿಸಲು ಅಲ್ಲ ಎಂದು ಮನವರಿಕೆ ಮಾಡಿಕೊಳ್ಳುವುದು ಅಗತ್ಯ. ಅವರು ಬೇರೆ ವಾರ್ಡ್ ಸಮಿತಿ ಸದಸ್ಯರುಗಳನ್ನು ವಾರ್ಡಿನ ಹೆಚ್ಚು ನಾಗರಿಕರ ಹತ್ತಿರ ತಲುಪಲು ಸಹಾಯ ಮಾಡುವಂತ ಹೆಚ್ಚಿನ ಕಣ್ಣುಗಳು, ಕಿವಿಗಳು ಮತ್ತು ಕೈಗಳು ಎಂದು ನೋಡುವುದು ಅಗತ್ಯ. ಚುನಾಯಿತ ನಗರ ಸಭಾ ಸದಸ್ಯರು ತಮ್ಮ ಕಾರ್ಯವಿಧಾನದಲ್ಲಿ ಪಾರದರ್ಶಿಕತೆ ಮತ್ತು ಹೊಣೆಗಾರಿಕೆ ಉಳ್ಳವರೂ ಆದರೆ, ಜನತೆ ಅವರಲ್ಲಿಟ್ಟ ನಂಬಿಕೆ ವರ್ಧಿಸಲು ಸಹಾಯಕವಾಗಿ ಇದರಿಂದ ಅವರಿಗೆ ಹೆಚ್ಚಿನ ಪ್ರಯೋಜನವೂ ಸಿಗುವಂತಾಗುತ್ತದೆ.

ನೀವು ಒಬ್ಬ ಚುನಾಯಿತ ಪ್ರತಿನಿಧಿ ಆಗಿರಲಿ ವಾರ್ಡ್ ಸಮಿತಿ ಸದಸ್ಯರೆ ಆಗಿರಲಿ ಅಥವಾ "ಸ್ವಯಂ ಸೇವಾ ಸಂಸ್ಥೆ ನಿವಾಸಿಗಳ" ಕ್ಷೇಮಾಭಿವೃದ್ಧಿ ಸಂಘ' ಅಥವ ಸಮುದಾಯದಲ್ಲಿ ನೆಲೆಸಿರುವ ಸಂಸ್ಥೆ ಆಗಿರಲೀ ಅಥವಾ ಒಬ್ಬ ಸಾಮಾನ್ಯ ನಾಗರಿಕನೇ ಆಗಿರಲಿ.

- ವಾರ್ಡ್ ಸಮಿತಿಗಳ ತಿಂಗಳ ಸಭೆಗಳನ್ನು ಕ್ರಮಬದ್ಧವಾಗಿ, ತಪ್ಪದೇ ಜರುಗಿಸಲು ಒತ್ತಾಯಿಸಿ.
- ಈ ಸಭೆಗಳಲ್ಲಿ ನಾಗರಿಕರು ಮತ್ತು ಅಧಿಕಾರಿಗಳ ಪಾಲುಗೊಳ್ಳುವಿಕೆಯನ್ನು ಖಚಿತಗೊಳಿಸಿ.



- ಸ್ವತಃ ಸಭೆಗಳಲ್ಲಿ ತಪ್ಪದೇ ಪಾಲುಗೊಳ್ಳಿ ಮತ್ತು ಅವುಗಳ ವ್ಯವಸ್ಥಿತಿ ಕಾರ್ಯಚರಣೆಯನ್ನು ಖಾತ್ರಿಗೊಳಿಸಿ.
- ಸಭೆಗಳ ಕಾರ್ಯ ಕಲಾಪಗಳ ತೀರ್ಮಾನಗಳ ಸರಿಯಾದ ರೀತಿಯ ದಾಖಲಾತಿಗೆ ಒತ್ತಾಯಿಸಿ.
- ದಾಖಲಾದ ಪ್ರತೀ ಸಮಸ್ಯೆ ಬಗ್ಗೆ ಕಾರ್ಯ ನಿರ್ವಹಿಸಿದ ವರದಿ ಪಡೆದುಕೊಳ್ಳಿ.
- ಆಗಾಗ್ಗೆ, ನಿಯತಕಾಲಿಕವಾಗಿ ನಾಗರಿಕರ ಅಗತ್ಯಗಳನ್ನು ಅರಿಯಲು, ನಾಗರಿಕರ ಮತ್ತು ವಾರ್ಡ್ ಸಮಿತಿಗಳ ಪರಸ್ಪರ ಸ್ಪಂದನೆಗೆ ಔಪಚಾರಿಕವಾದ ಅವಕಾಶಗಳನ್ನು ಒದಗಿಸಲು ಒತ್ತಾಯಿಸಿ.
- ವಾರ್ಡಿಗೆ ನಾಗರಿಕರಿಂದ ಸಿದ್ಧವಾದ, ಅಂದರೆ 'ತಳದಿಂದ ಮೇಲಕ್ಕೆ' ಹರಿಯುವ (bottom-up proce) ಪ್ರಕ್ರಿಯೆಯಲ್ಲಿ ಮೂಡಿದ ಯೋಜನೆಗಳಿಗೆ ಒತ್ತಾಯಿಸಿ.
- ನಾಗರಿಕರನ್ನು ವಾರ್ಡಿನ ಕಾಮಗಾರಿಗಳ ಉಸ್ತುವಾರಿಯಲ್ಲಿ ತೊಡಗಿಸಿ, ಅವರಿಗೆ ಇದಕ್ಕೆ ಬೇಕಾದ ಮಾಹಿತಿಯನ್ನು. 'ಸೊ ಮೊಟೊ" (Suo moto) ಮಾದರಿಯಲ್ಲಿ ಒದಗಿಸಿಕೊಡಿ. ಇದರ ಮೂಲಕ ಆಡಳಿತದಲ್ಲಿ ಪಾರದರ್ಶಕತೆಯನ್ನು ಹೆಚ್ಚಿಸಿ.
- ಕಾಮಗಾರಿಗಳ ಸಾಮಾಜಿಕ ಲೆಕ್ಕಶೋಧನೆ ಮೂಲಕ ಆಡಳಿತದಲ್ಲಿ ಹೊಣೆಗಾರಿಕೆಯನ್ನು ಹೆಚ್ಚಿಸಿ.
- ಸೆಕ್ಷನ್ 3 ಮತ್ತು 4 ರಲ್ಲಿ ಸೂಚಿಸಿರುವಂತೆ 74ನೇ ಸಂವಿಧಾನದ ತಿದ್ದುಪಡಿಗೆ ಬದಲಾವಣೆಗಳನ್ನು ತರಲು ಶಾಸಕರ ಮೇಲೆ ಪ್ರಭಾವವನ್ನು ಬೀರಿ. ಈ ಮೂಲಕ ವಿಕೇಂದ್ರೀಕರಣವನ್ನು ಹೆಚ್ಚಿಸಲು, ಸಮುದಾಯಗಳಿಗೆ ಸ್ಥಳೀಯ ಸಂಪನ್ಮೂಲಗಳ ಮೇಲೆ ಹಾಗೂ ತಮ್ಮ ಪ್ರದೇಶದ ಬಗ್ಗೆ ತೀರ್ಮಾನಗಳನ್ನು ತೆಗೆದುಕೊಳ್ಳುವ ಹತೋಟಿಯನ್ನು ಹೆಚ್ಚಿಸಲು, ನಗರ ಸಭೆಗೆ ಇದರ ಪರವಾಗಿ ನಿರ್ಧಾರವನ್ನು (ಠರಾವು) ತೆಗೆದುಕೊಳ್ಳಲು ಬೆಂಬಲಿಸಿ.
- ನಗರಾಭಿವೃದ್ಧಿ ಸಚಿವರು, ಶಾಸಕರು, ಸ್ಥಾಯಿಸಮಿತಿಗಳು ಮತ್ತು ರಾಜ್ಯ ಶಾಸಕಾಂಗದ ವಿಷಯ ಸಮಿತಿಗಳು (Subject Committees), ಇವುಗಳನ್ನು ಇಚ್ಛಿಸಿದ ಬದಲಾವಣೆಗಳನ್ನು ತರಲು ಪ್ರಭಾವಿಸುವುದು.

## ದಸ್ತಾವೇಜಿನ ಅನುಬಂಧ–1
## ವಾರ್ಡ್ ಕಮಿಟಿ ಮತ್ತು ವಾರ್ಡ್ ಬಿ.ಎಮ್.ಪಿ ಯ ಪಟ್ಟಿ

| ಸಂಖ್ಯೆ | ವಾರ್ಡ್ ಕಮಿಟಿಯ ಹೆಸರು | ವಾರ್ಡ್ ಸಂಖ್ಯೆ | ವಾರ್ಡ್ ಕಮಿಟಿಯ ಅಡಿ ಬರುವ ವಾರ್ಡ್‌ಗಳ ಹೆಸರುಗಳು | ಟೆಲಿ.ನಂ. ಎ.ಆರ್.ಓ ಗಳು |
|---|---|---|---|---|
| | **ಪಶ್ಚಿಮ ವಲಯ** | | | |
| 1. | ಮಲ್ಲೇಶ್ವರಂ | 5 | ಕೊದಂಡರಾಮ ನಗರ | |
| | | 6 | ದತ್ತಾತ್ರೇಯ ಟೆಂಪಲ್ | |
| | | 7 | ಮಲ್ಲೇಶ್ವರಂ | |
| 2. | ಮಹಾಲಕ್ಷ್ಮಿ ಪುರ | | | |
| | | 9 | ಸುಬ್ರಮಣ್ಯನಗರ | |
| | | 10 | ಮಹಾಲಕ್ಷ್ಮಿಪುರ | |
| | | 11 | ಪೀಣ್ಯ ಇಂಡಿಸ್ಟ್ರೀಯಲ್ ಲೇಅವುಟ್ | |
| | | 12 | ನಂದಿನಿ ಲೇಅವುಟ್ | |
| 3. | ಗಾಯತ್ರಿ ನಗರ | 8 | ಗಾಯತ್ರಿನಗರ | |
| | | 13 | ಗೆಳೆಯರ ಬಳಗ ಲೇಅವಟ್ | |
| | | 14 | ನಾಗಪುರ | |
| | | 23 | ಪ್ರಕಾಶ ನಗರ | |
| 4. | ರಾಜಾಜಿನಗರ | 15 | ರಾಜಾಜಿನಗರ | |
| | | 16 | ಕಮಲಾ ನಗರ | |
| | | 19 | ಬಸವೇಶ್ವರ ನಗರ | |
| | | 20 | ಶಿವನಗರ | |
| | **ದಕ್ಷಿಣ ವಲಯ** | | | |
| 5. | ಬಿನ್ನಿಪೇಟೆ | 31 | ಬಿನ್ನಿಪೇಟೆ | |
| | | 32 | ಕೆಂಪಾಪುರ ಅಗ್ರಹಾರ | |
| | | 33 | ಜಯ ನಗರ | |
| | | 34 | ಆರ್.ಪಿ.ಸಿ. ಲೇಔಟ್ | |
| 6. | ಗೋವಿಂದರಾಜನಗರ | 35 | ಮಾರೇನ ಹಳ್ಳಿ | |
| | | 36 | ಗೋವಿಂದರಾಜನಗರ | |
| | | 37 | ಅಮರ ಜ್ಯೋತಿ ನಗರ | |
| | | 38 | ಮೂಡಳಪಾಳ್ಯ | |
| 7. | ಚಂದ್ರಾ ಲೇಔಟ್ | 39 | ಚಂದ್ರಾಲೇಔಟ್ | |
| | | 40 | ಅತ್ತಿಗುಪ್ಪೆ | |



| | | | | |
|---|---|---|---|---|
| | | 41 | ಗಾಳಿ ಆಂಜನೇಯ ಟೆಂಪಲ್ | |
| 8. | ಜಯನಗರ | 57 | ಜೆ.ಪಿ. ನಗರ | |
| | | 58 | ಜಯನಗರ | |
| | | 59 | ಯೆಡಿಯೂರು | |
| | | 60 | ಪಟ್ಟಾಭಿರಾಮ ನಗರ | |
| 9. | ಕೊರಮಂಗಲ | 67 | ಕೊರಮಂಗಲ | |
| | | 68 | ಈಜೀಪುರ | |
| | | 69 | ನೀಲಸಂದ್ರ | |
| 10. | ಜೀವನ್ ಬೀಮಾನಗರ | 72 | ದೊಮ್ಮಲೂರು | |
| | | 73 | ಏರ್ ಪೋರ್ಟ್ | |
| | | 74 | ಜೀವನ್ ಬೀಮಾನಗರ | |
| | | 75 | ಜೋಗು ಪಾಳ್ಯ | |
| 11. | ಸರ್ವಜ್ಞ ನಗರ | 85 | ಸರ್ವಜ್ಞ ನಗರ | |
| | | 86 | ಮಾರುತಿ ಸೇವಾನಗರ | |
| | | 87 | ಲಿಂಗರಾಜ ಪುರ | |
| | | 89 | ಕಚರಕನ ಹಳ್ಳಿ | |
| 12. | ಜಯಮಹಲ್ | 91 | ಪುಲಕೇಶೀ ನಗರ | |
| | | 92 | ಜಯಮಹಲ್ | |
| | | 93 | ದೇವರ ಜೀವನಹಳ್ಳಿ | |